# ತಪೋವಾಣಿ

ಸಂಪುಟ 13 ಸಂಚಿಕೆ 11 ನವೆಂಬರ್ 2016 ರೂ.25

ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಚಂಪ**
(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಸೆಪ್ಟೆಂಬರ್ 2009ರ ಸಂಚಿಕೆ)

ನಾವು ದೇವಸ್ಥಾನಗಳನ್ನು ಕಟ್ಟಿ ಅಲ್ಲಿ ಅರ್ಚಕರಿಗೆ ಅಧಿಪತ್ಯ ವಹಿಸಿಕೊಡುತ್ತೇವೆ. ಅವರು ಹೇಳುವ ಶಾಸ್ತ್ರವಿಧಿಗಳನ್ನು ಪಾಲಿಸುತ್ತೇವೆ. ಅವರನ್ನು ನಮಗಾಗಿ ಪ್ರಾರ್ಥಿಸಲು ಕೇಳಿಕೊಳ್ಳುತ್ತೇವೆ. ಅವರನ್ನು ನಮ್ಮ ಮಧ್ಯವರ್ತಿಗಳಂತೆ, ನಮ್ಮ ಏಜೆಂಟರುಗಳಂತೆ ಕೆಲಸ ಮಾಡಲು ಬಿಡುತ್ತೇವೆ. ನಾವು ದೇವರನ್ನು ನೇರವಾಗಿ ಸಂಪರ್ಕಿಸಲು ಪ್ರಯತ್ನಿಸುವುದಿಲ್ಲ. ಮಧ್ಯವರ್ತಿಗಳಿಲ್ಲದೆ ಅಥವಾ ಸ್ವಯಂನಿಯುಕ್ತ ಏಜೆಂಟರುಗಳಿಲ್ಲದೆ ದೇವರನ್ನು ನೇರವಾಗಿ ಸಂಪರ್ಕಿಸಬಹುದೆಂದು ನಮಗೆ ತಿಳಿದೂ ಇಲ್ಲ. ಏಕೋ ಏನೋ ಅವುಗಳ ಬಗ್ಗೆ ನಾವು ಗಂಭೀರವಾಗಿ ಯೋಚಿಸುವುದಿಲ್ಲ. ದೇವಸ್ಥಾನಗಳ ಬಗ್ಗೆ ಮತ್ತು ಅರ್ಚಕರ ಬಗ್ಗೆ ಇರುವಷ್ಟು ತೀವ್ರತೆ ನಮಗೆ ದೇವರ ಬಗ್ಗೆ ಇನ್ನೂ ಬಂದಿಲ್ಲವೇನೋ.

ಋಷಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳಲ್ಲಿ ನಾನು ಇದೇ ಮನೋವೃತ್ತಿಯನ್ನು ಕಾಣುತ್ತೇನೆ. ಅವರಿಗೆ ಋಷಿಗಳ ಅಸ್ತಿತ್ವದ ಬಗ್ಗೆ ನಿಸ್ಸಂಶಯವಾಗಿ ನಂಬಿಕೆಯಿದೆ. ಏಕೆಂದರೆ ಅವರು ಋಷಿಗಳನ್ನು ಪ್ರಾರ್ಥಿಸಿ ಬಯಸಿದುದನ್ನು ಪಡೆಯುತ್ತಾರೆ. ಆದರೆ ಅವರು ಋಷಿಗಳನ್ನು ನೇರವಾಗಿ ಸಂಪರ್ಕಿಸಲು ಪ್ರಯತ್ನಿಸದೆ, ನನ್ನನ್ನು ಅವಲಂಬಿಸಿ ನಾನು ಮಧ್ಯವರ್ತಿಯಾಗುವಂತೆ ಕೇಳಿಕೊಳ್ಳುತ್ತಾರೆ. ನಾನು ಹಾಗೆಂದಿಗೂ ಮಾಡುವುದಿಲ್ಲ. ಧ್ಯಾನಿಗಳು ನೇರ ಸಂಪರ್ಕ ಸಾಧಿಸಲು ನಾನು ಸದಾ ಪ್ರೋತ್ಸಾಹಿಸುತ್ತೇನೆ.

ದೇವರನ್ನು ಮತ್ತು ಋಷಿಗಳನ್ನು ನಾವು ನಮ್ಮ ಇಷ್ಟಾರ್ಥಗಳನ್ನು ಪೂರೈಸುವವರು, ಎಂದುಕೊಂಡಿದ್ದೇವೆ. ಆದರೆ ನಾವು ದೇವರ ಮತ್ತು ಋಷಿಗಳ ಕೆಲವು ನಿಯಮಗಳನ್ನು ಮತ್ತು ಆದೇಶಗಳನ್ನು ಪಾಲಿಸಬೇಕೆಂಬುದನ್ನು ಅರಿಯಲೂ ಪ್ರಯತ್ನಿಸುವುದಿಲ್ಲ. ಏಕೆಂದರೆ ನಾವು ಸಂಪರ್ಕ ಸಾಧಿಸಿಲ್ಲ, ಈ ಮಟ್ಟದಲ್ಲಿ ಆ ಆದೇಶಗಳ ಬಗ್ಗೆ ನಮಗೆ ತಿಳಿದಿಲ್ಲ. ಆದರೆ ಋಷಿಗಳು ಸಂಪರ್ಕಿಸುವಂತಹ ಸೂಕ್ಷ್ಮ ಮಟ್ಟದಲ್ಲಿ ನಮಗೆ ಇವುಗಳ ಅರಿವಿದೆ.

ಕೆಲವೊಮ್ಮೆ ಕೆಲವು ಜನರು ಋಷಿಗಳ ಆದೇಶಗಳನ್ನು ಪಾಲಿಸುವುದಿಲ್ಲ ಎನ್ನುವುದು ಆಘಾತಕಾರೀ ವಿಷಯ. ಅವರು ವಾದಿಸುತ್ತಾರೆ, ಪ್ರತಿಭಟಿಸುತ್ತಾರೆ, ನಂತರ ಅಧ್ಯಾತ್ಮಿಕ ಬೆಳವಣಿಗೆಗೆ ಪೂರಕವಲ್ಲದ ಹಳೆಯ ಜಾಡಿನಲ್ಲಿಯೇ ಮುಂದುವರಿಯುತ್ತಾರೆ. ಜಾಗೃತ ಮಟ್ಟದಲ್ಲಿ ನಾನು ಈ ವಿಷಯವನ್ನು ಅವರ ಗಮನಕ್ಕೆ ತಂದರೆ, ಅವರು ನನ್ನೊಂದಿಗೆ ವಾದಿಸುತ್ತಾರೆ, ನನ್ನನ್ನು ಪ್ರತಿಭಟಿಸುತ್ತಾರೆ, ನಂತರ ತಮ್ಮ ಹಳೆಯ ಹಾದಿಯಲ್ಲಿಯೇ ಮುಂದುವರಿಯುತ್ತಾರೆ!

ಋಷಿಗಳ ಮಾತನ್ನು ಕೇಳದವರು ನಮ್ಮಿಂದ ದೂರ ಹೋಗುತ್ತಾರೆ. ಅಥವಾ ನಿಂತರೂ, ಕೆಲವೇ ದಿನಗಳಲ್ಲಿ ಇದ್ದಕ್ಕಿದ್ದಂತೆ ಮಾಯವಾಗುತ್ತಾರೆ. ವೈಯಕ್ತಿಕವಾಗಿ, ಇದಕ್ಕೆ ನನ್ನ ಅಭ್ಯಂತರವಿಲ್ಲ. ಜನರು ಆಯ್ಕೆ ಮಾಡುತ್ತಾರೆ ಅಥವಾ ಮಾಡದಿರುತ್ತಾರೆ, ಏಕೆಂದರೆ ಅವರು ಹಾಗೆ ಮಾಡಲು ಸ್ವತಂತ್ರರು. ಮಾರ್ಗದರ್ಶಿಸುವುದು ನನ್ನ ಕೆಲಸ, ಟೀಕೆ ಮಾಡುವುದಲ್ಲ.

ಜನರು ಸಹಜವಾಗಿ ಹಂದಿ ಜ್ವರದ ಬಗ್ಗೆ ಪ್ರಶ್ನಿಸುತ್ತಾರೆ. ಅದಕ್ಕೆ ಸರಳ ಅಥವಾ ನೇರ ಉತ್ತರಗಳಿಲ್ಲ. ಸತ್ಯವನ್ನು ಅರಗಿಸಿಕೊಳ್ಳುವುದೂ ಅಷ್ಟು ಸುಲಭವಲ್ಲ. ಇದು ನಮ್ಮ ಸಾಮೂಹಿಕ ಕರ್ಮಗಳ ಫಲ. 1978ರಲ್ಲೇ ನನ್ನ ಗುರುಗಳು ಇಂಥವುಗಳ ಬಗ್ಗೆ ಭವಿಷ್ಯ ನುಡಿದಿದ್ದರು. ನಾನು ನನ್ನ ಜನರಿಗೆ ಇನ್ನೂ ಹೆಚ್ಚಿನ ಬೆಳಕನ್ನು ಚಾನಲ್ ಮಾಡಲು ಹೇಳಿ, ಸುತ್ತಲೂ ಬೆಳಕಿನ ರಕ್ಷಾಕವಚವನ್ನು ನಿರ್ಮಿಸಿಕೊಳ್ಳಲು ಹೇಳುತ್ತೇನೆ. ಹಾಗೂ ಮನುಷ್ಯ ಮಟ್ಟದಲ್ಲಿ, ವೈದ್ಯಕೀಯ ಸಲಹೆಯನ್ನು ಪಡೆಯಲು ಹೇಳುತ್ತೇನೆ.

ಸಮಸ್ಯೆಯನ್ನು ಎರಡೂ ಮಟ್ಟಗಳಲ್ಲಿ ಬಗೆಹರಿಸುವುದು ಮುಖ್ಯ.

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ

**ಮಂಗಳವಾರ** (ಮಧ್ಯಾಹ್ನ 11.30 ರಿಂದ 12.30 ಮತ್ತು ಸಂಜೆ 5 ರಿಂದ 6 ಘಂ.)
ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆ,
ಗಾಂಧಿ ವೃತ್ತ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**ಕಾರ್ಯಕರ್ತರ ಸಭೆಯಲ್ಲಿ ಇಬ್ಬರು ಕಾರ್ಯಕರ್ತರು ಮಾತನಾಡಿದರು ಹಾಗೂ ಶ್ರೀಮತಿ ಅಂಜಲಿ ಪಾಟೀಲ್ ಅವರ ಜನ್ಮ ದಿನವನ್ನು ಆಚರಿಸಲಾಯಿತು**

### ಸುದ್ದಿ-ಸೂಚನೆ

- 27-11-2016 ರಂದು ತಪೋನಗರದಲ್ಲಿ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 25-11-2016 ರೊಳಗೆ ಮಾನಸ ಕಚೇರಿಯಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- ಗುರೂಜಿಯವರ ಅಪ್ರಕಟಿತ ಉಪನ್ಯಾಸಗಳ-ನ್ನೊಳಗೊಂಡ 'Thus Spoke Guruji, Vol-1' ಪುಸ್ತಕವನ್ನು ದಿನಾಂಕ 27-11-2016 ರಂದು ತಪೋನಗರದಲ್ಲಿ ನಡೆಯುವ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮದಲ್ಲಿ ಬಿಡುಗಡೆಮಾಡಲಾಗುವುದು.
- 2017ನೇ ಇಸವಿಯ ಡೆಸ್ಕ್ ಕ್ಯಾಲೆಂಡರ್ ಅನ್ನು ಕೂಡ 27-11-2016ರ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆಮಾಡಲಾಗುವುದು. ಅದನ್ನು ಕೋರಿದವರಿಗೆ ಮಾತ್ರ ಸೀಮಿತ ಸಂಖ್ಯೆಯಲ್ಲಿ ಮುದ್ರಿಸುವುದರಿಂದ, ಆಸಕ್ತ ಸಾಧಕರು ತಮ್ಮ ಪ್ರತಿಗಳನ್ನು ಕಾದಿರಿಸಲು ದಿನಾಂಕ 13-11-2016ರೊಳಗೆ ಮಾನಸ ಆಫೀಸಿನಲ್ಲಿ ನೊಂದಾಯಿಸಬೇಕಾಗಿ ವಿನಂತಿ.
- 8-1-2017ರಂದು ಪ್ರಾರಂಭವಾಗುವ ಶಂಬಲ ಗ್ರೂಪ್‌ನ ಹೊಸ ಬ್ಯಾಚ್‌ಗೆ ಸೇರಬಯಸುವ ಸಾಧಕರು, 31-12-2016ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ. ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2016 ರೊಳಗೆ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 08 | ಮಂಗಳ | ಶುಕ್ಲ ಅಷ್ಟಮಿ |
| 09 | ಬುಧ | ಶುಕ್ಲ ದಶಮಿ |
| 14 | ಸೋಮ | ಪೂರ್ಣಿಮಾ |
| 22 | ಮಂಗಳ | ಕೃಷ್ಣ ಅಷ್ಟಮಿ |
| 23 | ಬುಧ | ಗುರೂಜಿಯವರ ಮಹಾಸಮಾಧಿ ದಿನ |
| 27 | ಭಾನು | ಮಾಸ ಶಿವರಾತ್ರಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |
| 29 | ಮಂಗಳ | ಅಮಾವಾಸ್ಯೆ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12 ಲೈಟ್ ಚಾನಲಿಂಗ್: ಮಧ್ಯಾಹ್ನ12-1 |
| 13-11-2016 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 20-11-2016 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 27-11-2016 | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

### ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ
**ಭಾನುವಾರ, 27-11-2016**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್‌ನಲ್ಲಿ ಕಾರ್ಯಕ್ರಮ

ದಿನಾಂಕ 23-11-2016, ಬುಧವಾರದಂದು ಬೆಳಿಗ್ಗೆ 11.30ಕ್ಕೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸಲಾಗುವುದು.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಪ್ರತಿದಿನ ವಿದ್ಯಾರ್ಥಿಗಳು 15 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ತಂತ್ರವನ್ನು ಅಭ್ಯಾಸ ಮಾಡುತ್ತಾರೆ. ಅವರಲ್ಲೀಗ ಆತ್ಮವಿಶ್ವಾಸ ಮೂಡಿದೆ. ಈಗ ಸ್ವತಂತ್ರವಾಗಿ ಆಲೋಚನೆ ಮಾಡಿ ತಮ್ಮ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಗಿದೆ. ಅವರ ಗ್ರಹಣಶಕ್ತಿ ಮತ್ತು ಶಿಸ್ತು ಕೂಡಾ ಉತ್ತಮಗೊಂಡಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣವೂ ಹೆಚ್ಚುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದು ತುಂಬಾ ಒಳ್ಳೆಯ ತಂತ್ರವಾಗಿದ್ದು, ನಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪರಿಚಯಿಸಿದ್ದಕ್ಕೆ ನಿಮಗೆ ಧನ್ಯವಾದಗಳು.

– ಶ್ರೀಮತಿ ಜಯಂತಿ ಟಿ. ಕೆ., ಮುಖ್ಯೋಪಾಧ್ಯಾಯಿನಿ, ಸ್ವಾಮಿ ವಿವೇಕಾನಂದ ಪ್ರೌಢ ಶಾಲೆ, ಕುವೆಂಪು ನಗರ, ಕುಣಿಗಲ್

2015–16ರ ಶೈಕ್ಷಣಿಕ ವರ್ಷದಲ್ಲಿ, ಮಕ್ಕಳನ್ನು ಅಪಘಾತದಿಂದ ಮತ್ತು ಹಿಂದೆಬೀಳುವುದರಿಂದ ರಕ್ಷಿಸುವ ಉದ್ದೇಶದಿಂದ ನಾವು ಲೈಟ್ ಚಾನಲಿಂಗ್ ಅನ್ನು ಪ್ರತಿದಿನ 15 ನಿಮಿಷಗಳ ಕಾಲ ಅಭ್ಯಾಸ ಮಾಡುತ್ತಿದ್ದೆವು. ಅದು ಅದ್ಭುತವಾಗಿ ಕೆಲಸ ಮಾಡಿತು. ಅನಾರೋಗ್ಯದಿಂದಿರುವ ಮಕ್ಕಳನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಕುಳಿತುಕೊಂಡು 7 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಮಾಡಲು ಉತ್ತೇಜನ ನೀಡಲಾಯಿತು. ಈ ಅಭ್ಯಾಸದ ನಂತರ ಅವರೆಲ್ಲಾ ಗುಣಮುಖರಾಗಿ ಮತ್ತೆ ತರಗತಿಗಳಿಗೆ ಹಾಜರಾಗಲು ಸಾಧ್ಯವಾಯಿತು.

– ಶ್ರೀಮತಿ ವಿಜಯಾ ಡಿ., ಮುಖ್ಯೋಪಾಧ್ಯಾಯಿನಿ, ಮಹರ್ಷಿ ಅರವಿಂದ ಶಾಲೆ, ಪಂಚಶೀಲನಗರ ನಗರ, ಬೆಂಗಳೂರು

ಶಾಲೆಯ ಫಲಿತಾಂಶದಲ್ಲಿ ಸುಧಾರಣೆಯಾಗಿದೆ. ಹತ್ತನೇ ತರಗತಿಯ ವಿದ್ಯಾರ್ಥಿಗಳು ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ವಿಶೇಷ ತರಬೇತಿಯ ತರಗತಿ ಆರಂಭಿಸುವ ಮೊದಲು 30 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಅನ್ನು ಅಭ್ಯಾಸ ಮಾಡುತ್ತಿದ್ದರು.

– ಶ್ರೀ ಲಾಜು ಪಿ. ನಾಯಕ್, ಮುಖ್ಯೋಪಾಧ್ಯಾಯರು, ಶ್ರೇಯಸ್ ಪ್ರೌಢ ಶಾಲೆ, ಕಾಮಾಕ್ಷಿಪಾಳ್ಯ, ಬೆಂಗಳೂರು

ಲೈಟ್ ಚಾನಲಿಂಗ್ ನನಗೆ ಇಷ್ಟ. ಇದನ್ನು ನಾನು ಕಳೆದೆರಡು ವರ್ಷಗಳಿಂದ ನನ್ನ ಹಿಂದಿನ ಶಾಲೆಯಲ್ಲಿರುವಾಗಿನಿಂದ ಅಭ್ಯಾಸ ಮಾಡುತ್ತಿದ್ದೇನೆ. ನಾನು ಆರೋಗ್ಯವಂತನಾಗಿದ್ದೇನೆ ಮತ್ತು ನನ್ನ ಮನಸ್ಸು ಅತ್ಯಂತ ಶಾಂತವಾಗಿದೆ.

– ಸಂಗೀತಾ ಎಸ್., ವಿದ್ಯಾರ್ಥಿನಿ, ಟರ್ಬ್ಸ್ ಕಮ್ಯುನಿಟಿ ಶಾಲೆ, ಫ್ರೇಜರ್ ಟೌನ್, ಬೆಂಗಳೂರು

ಒಬ್ಬರು ಬೆಳಿಗ್ಗೆ ನನ್ನನ್ನು ಬೈದರು, ಅದರಿಂದಾಗಿ ನಾನು ಬಹಳ ದುಃಖದಿಂದಿದ್ದೆ. ಈಗ, ಲೈಟ್ ಚಾನಲ್ ಮಾಡಿದ ನಂತರ ನನಗದು ಮರೆತು ಹೋಯಿತು ಹಾಗೂ ನಾನು ಸಂತೋಷದಿಂದಿದ್ದೇನೆ.

– ಡಫ್ನಿ, ವಿದ್ಯಾರ್ಥಿ, ಟರ್ಬ್ಸ್ ಕಮ್ಯುನಿಟಿ ಶಾಲೆ, ಫ್ರೇಜರ್ ಟೌನ್, ಬೆಂಗಳೂರು

ಲೈಟ್ ಚಾನಲಿಂಗ್ ಮಾಡಿದ ನಂತರ ನನ್ನ ಮನಸ್ಸು ಶಾಂತವಾಗಿದೆ. ನನಗಿದ್ದ ಸಮಸ್ಯೆಗಳನ್ನು ಮತ್ತು ನನ್ನನ್ನೇ ನಾನು ಕೆಲವು ಸಮಯದವರೆಗೆ ಮರೆತೆ. ನನ್ನಲ್ಲೀಗ ಸಂತೋಷ ತುಂಬಿದೆ.

– ನ್ಯಾನ್ಸಿ ಥಾಮಸ್, ವಿದ್ಯಾರ್ಥಿ, ಟರ್ಬ್ಸ್ ಕಮ್ಯುನಿಟಿ ಶಾಲೆ, ಫ್ರೇಜರ್ ಟೌನ್, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ನಾಲ್ಕು ವರ್ಷಗಳ ಹಿಂದೆ, ನಮ್ಮ ಗುರೂಜಿಯವರು ತಮ್ಮ ಸಂಪೂರ್ಣ ಕೆಲಸವನ್ನು ಸೂಕ್ಷ್ಮಮಟ್ಟಕ್ಕೆ ಸ್ಥಳಾಂತರಿಸಿದರು. ಈಗ ಅವರೊಂದಿಗಿನ ದೈವೀಕವಾದ ಆ ಅನೌಪಚಾರಿಕ ಮಾತುಕತೆಗಳು ಮತ್ತು ಭಾನುವಾರದ ತರಗತಿಗಳಲ್ಲಿನ ಅವರ ಭೌತಿಕ ಉಪಸ್ಥಿತಿಯ ಪರಮಾನಂದವು ಇಲ್ಲವಾದರೂ; ಪ್ರತಿಯೊಂದು ತೆರೆದ ಹೃದಯಕ್ಕೆ ಅವರ ಬೆಳಕು ಉಕ್ಕಿ ಹರಿಯುತ್ತಿದೆ ಮತ್ತು ಅವರ ಮಾರ್ಗದರ್ಶನವು ಪ್ರತಿಯೊಂದು ತೆರೆದ ಮನಸ್ಸನ್ನು ತುಂಬುತ್ತಿದೆ. ಈಗಿನ ತರಗತಿಗಳಲ್ಲಿ ಯಾವುದೇ ದಿವ್ಯಜ್ಞಾನ ಬಯಲಾಗುತ್ತಿಲ್ಲವಾದರೂ, ಅವರು, ಮಾನವ ಗುಣದ ನಮಗೆ ನಮ್ಮ ಉನ್ನತ ಆತ್ಮವನ್ನು ಬಹಿರಂಗಗೊಳಿಸುವುದನ್ನು ಮುಂದುವರೆಸುತ್ತಿದ್ದಾರೆ. ಹಾಗೆಯೇ, ನಿವಾಸಿಗಳ ಕೂಟದಲ್ಲಿ ನಾವೆಲ್ಲಾ ಕುಳಿತು ಅವರ ಬರುವಿಕೆಗಾಗಿ ಕಾತುರದಿಂದ ಈಗ ಕಾಯುವುದಿಲ್ಲ. ಆದರೂ ಕೂಟಗಳಲ್ಲಿರುವ ಎಲ್ಲರಿಗೂ, ತುಂಬು ಹೃದಯದ ವಿನೋದ ಹಾಗೂ ಸಂತೋಷದ ರೂಪದಲ್ಲಿ ಅವರು ತಮ್ಮ ಉಪಸ್ಥಿತಿಯನ್ನು ಪ್ರಕಟಪಡಿಸುತ್ತಾರೆ. ಕಾರ್ಯಕರ್ತರಿಗೆ ತಮ್ಮೊಂದಿಗೆ ಅನೌಪಚಾರಿಕವಾಗಿ ಕುಳಿತು ಕಾಫಿ ಕುಡಿಯುತ್ತಿದ್ದ ಗುರೂಜಿಯವರನ್ನು ನೋಡಲು ಸಾಧ್ಯವಿಲ್ಲದಿದ್ದರೂ, ಅವರು ಪ್ರತೀ ಕಾರ್ಯಕರ್ತರ ಸಭೆಯನ್ನು ಪ್ರೇರಣೆಯಿಂದ ತುಂಬುತ್ತಾರೆ.

ಧ್ಯಾನಿಗಳಿಗೆ ಕಳುಹಿಸುವ ಹುಟ್ಟುಹಬ್ಬದ ಕಾರ್ಡುಗಳಲ್ಲಿ ಈಗ ಗುರೂಜಿಯವರ ಸಹಿ ಇರುವುದಿಲ್ಲ, ಆದರೂ ಪ್ರತೀಬಾರಿ ಅವರು ಪಿತೃಸಮಾನ ಪ್ರೀತಿಯನ್ನು ಕಳುಹಿಸುತ್ತಾರೆ. ಸಮಸ್ಯೆಗಳಿಗೆ ಪರಿಹಾರವನ್ನು ಬಯಸಿ ಬರುವ ಇ–ಮೇಲ್‌ಗಳಿಗೆ ಅವರು ಸ್ವತಃ ಉತ್ತರಿಸುತ್ತಿಲ್ಲವಾದರೂ, ಸಾಧ್ಯವಿರುವ ಎಲ್ಲಾ ರೀತಿಯಲ್ಲಿ ರಕ್ಷಣೆಯನ್ನು, ಉತ್ತರವನ್ನು ಮತ್ತು ಭರವಸೆಯನ್ನು ಅವರು ಒದಗಿಸುತ್ತಿದ್ದಾರೆ.

ತಪೋನಗರದಲ್ಲಿ ನಮಗೆ ಗುರೂಜಿಯವರನ್ನು ಅವರ ಸೀಮಿತವಾದ ಭೌತಿಕ ರೂಪದಲ್ಲಿ ನೋಡುವ ಸೌಭಾಗ್ಯವಿಲ್ಲದಿದ್ದರೂ, ವರ್ತಮಾನದಲ್ಲಿ ಬೇರೂರಿಕೊಂಡೇ ಉನ್ನತ ಪ್ರಪಂಚಗಳಲ್ಲಿನ ಅನಂತತೆಯನ್ನು ಅನ್ವೇಷಿಸಲು ಸನ್ನೆಮಾಡಿ ಕರೆಯುತ್ತಾರೆ. ನಮ್ಮ ದೃಷ್ಟಿಗೆ ಅವರು ಅಗೋಚರವಾದರೂ; ಅನುಭವಿಸಬಲ್ಲ ಹಾಗೂ ಗ್ರಹಿಸಬಲ್ಲ ನಮ್ಮ ಹೃದಯಗಳಲ್ಲಿ ಅವರು ಸದಾ ನೆಲಸಿರುತ್ತಾರೆ. ಅವರು ತಮ್ಮ ಮಹಾಸಮಾಧಿಯಲ್ಲಿ ಮೌನವಾಗಿರುವಂತೆ ಕಾಣಿಸಿದರೂ, ಆ ಮೌನದಲ್ಲಿ ಅವರು ಸದಾ ಸ್ಪಂದನ ಶೀಲರಾಗಿರುತ್ತಾರೆ.

ಗುರೂಜಿ ಎಲ್ಲಿದ್ದಾರೆಂಬುದು ಪ್ರಶ್ನೆಯಲ್ಲ, ಅವರ ಅನ್ವೇಷಕರಿಗೆ ಅವರು ಎಲ್ಲಿ ಇಲ್ಲ ಎಂಬುದು ಪ್ರಶ್ನೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

### ಮೇ 18, 2005 – ಗುರೂಜಿಯವರ ಜನ್ಮ ದಿನ

ನಾನು ಇಲ್ಲಿಗೆ ಬಂದು ಈ ರೀತಿ ಕುಳಿತಾಗಲೆಲ್ಲ, ತುಂಬ ಮಾತನಾಡಬೇಕೆಂದು ಬರುತ್ತೇನೆ, ಎಲ್ಲವನ್ನೂ ನಿಮಗೆ ಹೇಳಿಬಿಡಬೇಕೆಂದು ಬರುತ್ತೇನೆ, ಆದರೆ ನಾನು ಬಾಯಿ ತೆರೆದಾಗ, ಎಲ್ಲವನ್ನೂ ಮಾತನಾಡಲು ನನಗೆ ಸಾಧ್ಯವಿಲ್ಲವೆಂದು ಅರಿಯುತ್ತೇನೆ! ಬಹಳ ವಿಷಯಗಳು ಹೇಳದೆಯೇ ಉಳಿಯುತ್ತವೆ, ಬಹುಶಃ ಅನೇಕ ವಿಷಯಗಳನ್ನು ಹೇಳಲು ಸಾಧ್ಯವಿಲ್ಲ. ಮಾತುಗಳು ಬಹಳಷ್ಟನ್ನು ಹೇಳಿದರೆ ಮೌನವು ಇನ್ನೂ ಹೆಚ್ಚು ಹೇಳುತ್ತದೆ ಎಂದು ಎಲ್ಲೋ ಓದಿದ್ದೇನೆ. ಅದನ್ನೇ ನಾನು ಅಪ್ರಜ್ಞಾಪೂರ್ವಕವಾಗಿ ಮಾಡಲು ಪ್ರಯತ್ನಿಸಿದ್ದು. ಸ್ವಲ್ಪ ಮಾತನಾಡಿ, ಬಹಳಷ್ಟನ್ನು ಮಾತನಾಡದೇ ಹಾಗೂ ಕೆಲವೊಮ್ಮೆ ಮೌನದ ಮೂಲಕ ಬಹಳಷ್ಟು ವಿಷಯಗಳನ್ನು ಹಸ್ತಾಂತರಿಸಲು ನಾನು ಅಪ್ರಜ್ಞಾಪೂರ್ವಕವಾಗಿ ಬಯಸಿದ್ದೆ. ಕೆಲವೊಮ್ಮೆ ಬೇಕೆಂದೇ ಹೀಗೆ ಮಾಡುತ್ತೇನೆ, ಆಗೆಲ್ಲ ಜನರು ನಾನು ಹೇಳದೇ ಇದ್ದದ್ದನ್ನು ಗ್ರಹಿಸಿದ್ದಾರೆ. ಇದೊಂದು ಸುಂದರ ಅನುಭವ. ಆಲಿಸಲು ಇಷ್ಟವಿದ್ದವರು, ಅದು ಪದಗಳಲ್ಲಿ ಇರಲಿ ಅಥವ ಇಲ್ಲದಿರಲಿ, ಕೇಳಿಸಿಕೊಳ್ಳುತ್ತಾರೆ ಎಂದು ನನಗೆ ಅರ್ಥವಾಗಿದೆ.

ಇಪ್ಪತ್ತೈದು ವರ್ಷಗಳ ಹಿಂದೆ, ಇದೇ ದಿನ, 18ನೇ ಮೇ 1981 ರಂದು ನಾನು ನನ್ನ ಗುರುವಿನ ಜತೆಗೂಡಿದೆ. ನನ್ನ ಕೆಲಸವನ್ನು ಬಿಟ್ಟೆ, ಸಂಸಾರವನ್ನು ಬಿಡಲಿಲ್ಲ ಆದರೆ ಅದರಿಂದ ದೂರವುಳಿದೆ; ಅದು ಆಗಲೇ ಬೇಕಿತ್ತು. ಇಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ಮನೋವತಿಯ 50 ಎಕರೆ ವಿಸ್ತೀರ್ಣದ ಅಮರರವರ ಜಮೀನಿಗೆ ಹೋಗಿ ಅಲ್ಲಿ ವಾಸಮಾಡಲು ಪ್ರಾರಂಭಿಸಿದೆ. ಅಮರರವರು ನನಗೆ 'ಕೃಷ್ಣಾನಂದ' ಎಂದು ಹೆಸರಿಟ್ಟರು. ಒಮ್ಮೆ ನಡೆದಾಡಲು ಹೋದಾಗ ಅವರೊಂದಿಗೆ ನಾನು ಮಾತ್ರ ಇದ್ದೆ. ನಾವು ಹಾಗೆ ಹೋದಾಗಲೆಲ್ಲ ಅಲ್ಲಿ ಮೌನವಿರುತ್ತಿತ್ತು. ಅಂದು ಇದ್ದಕ್ಕಿದ್ದ ಹಾಗೆ ಅವರು ನನ್ನ ಕಡೆಗೆ ತಿರುಗಿ ಹೇಳಿದರು, 'ನಾನಿಲ್ಲಿ ಒಂದು ಸ್ವರ್ಗವನ್ನು ನೋಡಬಯಸುತ್ತೇನೆ.' ಆ ಮಾತು ನನ್ನ ಮೇಲೆ ಅತ್ಯಂತ ದೊಡ್ಡ ಪ್ರಭಾವ ಬೀರಿತು. ಈ ಸ್ವರ್ಗವನ್ನು ಸಾಕಾರಗೊಳಿಸಲು, ಅಭಿವ್ಯಕ್ತಿಸಲು ನನ್ನೆಲ್ಲ ಶಕ್ತಿಯನ್ನು ವಿನಿಯೋಗಿಸಿದೆ. ಅಮರರವರು ನನಗೆ ಅಪಾರ ಜ್ಞಾನವನ್ನು ಮತ್ತು ಚೈತನ್ಯವನ್ನು ಕೊಟ್ಟರು. 'ನಾನಿಲ್ಲಿರುವುದಕ್ಕೆ ಅವರೊಬ್ಬರೇ ಕಾರಣ' ಎಂದು ನಮ್ರತೆಯನ್ನು ತೋರಿಸಲು ಪ್ರಯತ್ನಿಸದೆ ಹೇಳುತ್ತೇನೆ.

ಮೇ 1981 ರಂದು ನಾನಲ್ಲಿಗೆ ಹೋದೆ, ಆಗಸ್ಟ್ 1982ರಲ್ಲಿ ಅವರು ಇಲ್ಲವಾದರು. ಅದು ಬಹಳ ಅನಿರೀಕ್ಷಿತವಾಗಿತ್ತು. ಅವರು ತಮ್ಮ ದೇಹವನ್ನು ಬಿಟ್ಟರೂ ತಮ್ಮ ಕನಸುಗಳನ್ನು ಹಿಂದೆಯೇ ಬಿಟ್ಟು ಹೋದರು. ಮಾಸ್ಟರ್‌ಗಳ ಕನಸುಗಳು ಮನುಕುಲದ ಭವಿಷ್ಯವನ್ನು ರೂಪಿಸುತ್ತವೆ. ಇದು ಅಮರರವರ ವಿಷಯದಲ್ಲಿ ಮಾತ್ರ ಸತ್ಯವಲ್ಲ, ಪ್ರತಿಯೊಬ್ಬ ಮಹಾನ್ ಮಾಸ್ಟರ್‌ಗಳ ವಿಷಯದಲ್ಲೂ ಇದು ಸತ್ಯ. ಅವರ ಕನಸುಗಳೇ ನನ್ನ ಗುರಿಯಾಯಿತು. ನಾನದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಅವರು ತೀರಿಕೊಂಡ ನಂತರ, ಅವರ ಸುತ್ತಲಿನ ಜನರು ಆಧಾರವನ್ನು ಕಳೆದುಕೊಂಡರು, ದಿಕ್ಕನ್ನು ಕಳೆದುಕೊಂಡರು ಹಾಗೂ ನಿಧಾನವಾಗಿ ದಿನಕಳೆದಂತೆಲ್ಲ ಅನೇಕರು ಬಿಟ್ಟು ಹೋಗತೊಡಗಿದರು. ಕೆಲವರು ಅನ್ಯ ಮಾರ್ಗಗಳನ್ನು ಸೇರಿದರೆ ಕೆಲವು ವಿಶೇಷ ವ್ಯಕ್ತಿಗಳು ಈಗ ಕೂಡ ಧ್ಯಾನವನ್ನು ಮಾಡುತ್ತಿದ್ದಾರೆ. ಅಮರರವರು ಎಲ್ಲ ತಂತ್ರಗಳನ್ನೂ ಬರೆಸಿದ್ದರು ಮತ್ತು ಜನರಿಗೆ ಕೊಡಲು ಮುಂದಿನ ಹಂತದ ಮಾರ್ಗದರ್ಶನದ ಬಗ್ಗೆ ಬಹಳ ಸ್ಪಷ್ಟ ಸೂಚನೆಗಳನ್ನು ಕೊಟ್ಟಿದ್ದರೆಂದು ನಮಗೆ ಅರಿವಾಯಿತು.

ನಾನು ಹೆಚ್ಚೇನೂ ಮಾಡಲಿಲ್ಲ, ಅದ್ಭುತವಾದುದೇನನ್ನೂ ಮಾಡಲಿಲ್ಲ. ನಾನು ಮಾಡಿದ್ದು ಅತ್ಯಂತ ಸರಳವಾದುದು – ಅಮರರವರಿಗೆ ನಾನು ಬದ್ಧನಾಗಿದ್ದೆ, ಈ ಮಾರ್ಗಕ್ಕೆ ಬದ್ಧನಾಗಿದ್ದೆ, ಆ ನಂತರವಷ್ಟೇ ಅಮರರವರು ನನಗೆ 'ಎಲ್ಲವನ್ನೂ' ಕೊಟ್ಟರು. ಅಮರರವರು ನನಗೆ ನಿಮ್ಮೆಲ್ಲರನ್ನು ಕೊಟ್ಟರು! ಎಲ್ಲಕ್ಕೂ ಮಿಗಿಲಾಗಿ, ಈ ಕೇಂದ್ರ ಸ್ಥಾಪನೆಯಾದ ಮೇಲೆ ಅಮರರವರು ನನಗೆ ಸ್ಪಷ್ಟ ನಿರ್ದೇಶನವನ್ನು ಕೊಟ್ಟರು. ನಮಗೊಂದು ಯೋಜನೆಯನ್ನು ಕೊಟ್ಟರು. ಇದು 400 ವರ್ಷಗಳು ನಡೆಯುವ ಯೋಜನೆ. ಅವರು ಜ್ಞಾನ ಮತ್ತು ಚೈತನ್ಯಗಳನ್ನು ಕೊಟ್ಟರು. ಈ ಯೋಜನೆಯು, ಬೇರೆಯವರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಜನರಿಗೆ ತರಬೇತಿ ನೀಡುವುದನ್ನೂ ಒಳಗೊಂಡಿದೆ, ಏಕೆಂದರೆ ವೈಯಕ್ತಿಕವಾಗಿ ಸಾಧನೆ ಮಾಡುವುದು ಸುಲಭವಲ್ಲ. ಯಾವಾಗಲೂ ಅಡಚಣೆಗಳಿರುತ್ತವೆ – ನಮಗೆ ನಾವೇ ಬಹುದೊಡ್ಡ ಅಡಚಣೆ! ಬೇರೆಯವರಿಗೆ ಮಾರ್ಗದರ್ಶನ ನೀಡುವುದು ಇನ್ನೂ ಹೆಚ್ಚು ಕಷ್ಟ. ನಾವು ವಿಷಯಗಳನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು, ನಾವು ಏನು ಮಾಡುತ್ತಿದ್ದೇವೆನ್ನುವುದು ನಮಗೆ ತಿಳಿದಿರಬೇಕು ಹಾಗೂ ನಮ್ಮಲ್ಲಿ ಅಪರಿಮಿತ ತಾಳ್ಮೆ ಮತ್ತು ಪ್ರೀತಿ ಇರಬೇಕು. ಜನರಿಗೆ ತರಬೇತಿ ನೀಡುವ ಕೆಲಸವನ್ನು ಅಮರರವರು ಕೊಟ್ಟಿದ್ದಾರೆ. ಅದಕ್ಕೆ ನನ್ನಲ್ಲಿ ಬಹಳ ಜನರಿದ್ದಾರೆ. ನನ್ನ ಬಳಿ ಅದ್ಭುತರಾದ ಕಾರ್ಯಕರ್ತರು ಮತ್ತು ಶಿಕ್ಷಕರಿದ್ದಾರೆ. ಇನ್ನೂ ಕಾರ್ಯಕರ್ತರು ಅಥವ ಶಿಕ್ಷಕರಾಗಿಲ್ಲದ, ಆದರೆ ಆ ಸಾಧ್ಯತೆಗಳಿರುವ ಇನ್ನೂ ಅನೇಕರಿದ್ದಾರೆ. 'ಜನರನ್ನು ಹೆಚ್ಚಿಸಿಕೊಳ್ಳಬೇಡ' ಎಂದು ಅಮರರವರು ಖಚಿತವಾಗಿ ಹೇಳಿದ್ದರು. 'ಮುಂದಿನ ಪೀಳಿಗೆಗಾಗಿ ಕೆಲಸ ಮಾಡು' ಎಂದೂ ಹೇಳಿದ್ದರು. ದೂರದರ್ಶನದಲ್ಲಿ ಅಥವ ನಿಯತಕಾಲಿಕಗಳಲ್ಲಿ ಅಥವ ದಿನಪತ್ರಿಕೆಗಳಲ್ಲಿ ನಮ್ಮ ಮುಖಗಳನ್ನು ಕಾಣುವ ಪ್ರಲೋಭನೆಗಳಿಗೆ ಈಡಾಗುವುದು ಬಹಳ ಸುಲಭ. ಯಾರಿಗೂ ಅಮರರವರ ಬಗ್ಗೆ ತಿಳಿದಿರಲಿಲ್ಲ, ಆದರೆ ಅವರು ಆ ಕಾಲದಲ್ಲಿನ ಅತಿ ದೊಡ್ಡ ಮಾಸ್ಟರ್ ಆಗಿದ್ದರು. ಅವರ ಬೆಲೆ ನನಗೆ ತಿಳಿದಿದೆ, ಏಕೆಂದರೆ ನಾನು ಅವರನ್ನು ಭೇಟಿಯಾಗಿದ್ದೆ, ನಾನು ಅವರನ್ನು ಅರಿತಿದ್ದೆ. ಪ್ರಚಾರದಿಂದ ದೂರ ಇದ್ದುಕೊಂಡು ಮುಂದಿನ ಪೀಳಿಗೆಗಾಗಿ ಕೆಲಸಮಾಡುವುದು ನಮಗೆ ಕಷ್ಟವಾಗಲಿಲ್ಲ. ಈ ಮಹಾನ್ ಕೆಲಸದ ಗಮನಾರ್ಹ ಭಾಗವನ್ನು ನಾವು ಮಾಡಿದ್ದೇವೆಂದು ನಾನು ಭಾವಿಸುತ್ತೇನೆ. ನಮಗೆ ಒಂದು ಕೇಂದ್ರವಿದೆ, ಒಂದು ಯೋಜನೆಯಿದೆ ಹಾಗೂ ಕಾರ್ಯಕರ್ತರ ತಂಡವಿದೆ. ನಾವು ಪ್ರೀತಿಯನ್ನು ಅಭಿವ್ಯಕ್ತಿಸಬೇಕು, ಅಪಾರ ಪ್ರೀತಿಯನ್ನು ಹೊಂದಿರಬೇಕು ಎಂದು ಜನರಿಗೆ ತಿಳಿದಿದೆ. ಅವರು ಕೆಲಸವನ್ನು ಅರ್ಥಮಾಡಿಕೊಂಡಿದ್ದಾರೆ, ಇದು ಬಹಳ ಮುಖ್ಯ. ಮುಂದಾಳತ್ವವಿದೆ ಎನ್ನುವುದನ್ನು ಒತ್ತುಕೊಟ್ಟು ಹೇಳಲು ಇಷ್ಟ ಪಡುತ್ತೇನೆ. ನಾನಿರಲಿ ಇಲ್ಲದಿರಲಿ, ಕೆಲಸ ಮುಂದುವರಿಯುತ್ತದೆಯೆಂದು ನನಗೆ ತಿಳಿದಿದೆ. ಇದನ್ನೇ ಹಾಸ್ಯವಾಗಿ ಹೇಳಬೇಕೆಂದರೆ, ಬಹುಶಃ ನಾನಿಲ್ಲದಿದ್ದರೆ ಅವರು ಉತ್ತಮವಾಗಿ ಕೆಲಸ ಮಾಡುತ್ತಾರೆ! ಈಗಾಗಲೇ ಮುಂದಾಳತ್ವವಿದೆ, ಅದು ಒಂದು ತಂಡವಾಗಿದ್ದರೂ ಅಲ್ಲಿ ಘರ್ಷಣೆಯಿಲ್ಲದಿರುವುದು ಅದರ ಸೊಬಗು. ಪ್ರಮುಖ ಸ್ಥಾನವನ್ನು ಅಲಂಕರಿಸಲು ಯಾವ ಒಬ್ಬ ವ್ಯಕ್ತಿಯೂ ಪ್ರಯತ್ನಿಸುತ್ತಿಲ್ಲ. ಅದೇ ಇಲ್ಲಿನ ಸೊಬಗು, ಅದೇ ಋಷಿಗಳ ಬಳಿ ಕೆಲಸ ಮಾಡುವುದರ ಸೊಬಗು. ನಮ್ಮ ಅಹಂ ಅನ್ನು ಎಲ್ಲಿಡಬೇಕೆಂದು ಋಷಿಗಳಿಗೆ ತಿಳಿದಿದೆ; ಬಾಗಿಲಿನ ಹೊರಗೆ ನಮ್ಮ ಅಹಂ ಅನ್ನು ಇಡದಿದ್ದರೆ ನಾವು ಒಳಗೆ ಪ್ರವೇಶಿಸಲಾಗದು. ಆ ರೀತಿ ಆಗುವಂತೆ ಅವರು ನೋಡಿಕೊಳ್ಳುತ್ತಾರೆ. ಆದ್ದರಿಂದಲೇ ಎಲ್ಲವೂ ಸರಾಗವಾಗಿರುತ್ತದೆ, ಎಲ್ಲವೂ ಅದ್ಭುತವಾಗಿರುತ್ತದೆ. ಇದರ ಬಗ್ಗೆ ನನಗೆ ಬಹಳ ಸಂತೋಷವಿದೆ.

ಈಗಿರುವ ವ್ಯವಸ್ಥೆಯೇ ಮುಂದುವರಿಯುತ್ತದೆ. ಭೌತಿಕ ಮಟ್ಟದಲ್ಲಿ ನೀವು ಕಾಣುವ ಎಲ್ಲವನ್ನೂ ಮತ್ತು ಬೇರೆ ಮಟ್ಟಗಳ ಕೆಲಸವನ್ನೂ ನಾನೊಬ್ಬನೇ ಸಾಧಿಸಿಲ್ಲ. ಅದು ಅಸಾಧ್ಯ. ಜನರು ತಮ್ಮ ಬಾಳನ್ನು ಇದಕ್ಕಾಗಿ ಮೀಸಲಿಟ್ಟಿದ್ದಾರೆ, ತಮ್ಮ ಸಮಯವನ್ನು ತ್ಯಾಗ ಮಾಡಿದ್ದಾರೆ, ಅಪಾರ ಧನಸಹಾಯ ಮಾಡಿದ್ದಾರೆ ಹಾಗೂ ನೇರವಾಗಿ ಭಾಗವಹಿಸಲು ಆಗದಿದ್ದವರು ತಮ್ಮ ಪ್ರೀತಿ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಿಂತ ಹೆಚ್ಚಿನದೇನು ಬೇಕಾಗಿದೆ ನಮಗೆ? ಅಮರರವರ ಮತ್ತು ಋಷಿಗಳ ಆಶೀರ್ವಾದ ನಮ್ಮ ಮೇಲಿದೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

4–1–2015

ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಪುನರಾವರ್ತಿಸಲು ಇದು ಒಳ್ಳೆಯ ಸಮಯವೆಂದು ನಾನು ಭಾವಿಸುತ್ತೇನೆ. ಅವು ನಮಗಾಗಲೇ ತಿಳಿದಿವೆ, ಆದರೆ ಪುನರಾವರ್ತನೆ ಯಾವಾಗಲೂ ಸಹಾಯಕ.

'ಹೊಸ ವರ್ಷಕ್ಕೆ ಸಂದೇಶವೇನು?' ಎಂದು ಜನರು ಕೇಳಿದಾಗ, 'ಅದೇ ಸಂದೇಶ. ಈ ಎಲ್ಲ ವರ್ಷಗಳಲ್ಲಿ ನೀವು ಪಡೆಯುತ್ತಿರುವ ಅದೇ ಸಂದೇಶವನ್ನು ಅನುಸರಿಸಿ' ಎಂದು ಗುರೂಜಿಯವರು ಹೇಳುತ್ತಿದ್ದುದು ನನಗೆ ನೆನಪಿದೆ.

'ನಾವಿಲ್ಲೇಕೆ ಇದ್ದೇವೆ? ಈ ಮಾರ್ಗದಿಂದ ನಾವೇನನ್ನು ನಿರೀಕ್ಷಿಸುತ್ತೇವೆ? ನಮ್ಮ ಗುರಿ ಏನು?' ಎಂದು ನಮ್ಮನ್ನೇ ಕೇಳಿಕೊಳ್ಳಲು ಇದು ಸೂಕ್ತ ಸಮಯವೆಂದು ನನಗನ್ನಿಸುತ್ತದೆ. ಇವೆಲ್ಲವನ್ನೂ ವಿವರಿಸುವುದರಿಂದ ನಮಗೆ ಸಹಾಯವಾಗುತ್ತದೆಂದು ನಾನು ಭಾವಿಸುತ್ತೇನೆ. ನಮ್ಮಲ್ಲಿ ಅನೇಕರು ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಇಲ್ಲಿಗೆ ಬಂದಿದ್ದೇವೆ. ಅದರಲ್ಲಿ ತಪ್ಪೇನೂ ಇಲ್ಲ. ನಮ್ಮಲ್ಲಿ ಬಹುತೇಕರು ಈ ಮಾರ್ಗಕ್ಕೆ ಬಂದಿರುವುದೇ ಹಾಗೆ.

ಈ ಮಾರ್ಗದಲ್ಲಿ ಸ್ವಲ್ಪ ಸಮಯ ಕಳೆದವರಿಗೆ, ತಮ್ಮ ಗುರಿಗಳು ಬದಲಾಗುತ್ತವೆ ಎಂದು ತಿಳಿದಿದೆ. ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಕ್ಕಾಗ, ನಾವು ಇನ್ನೂ ಉನ್ನತವಾದುದನ್ನು ಎದುರು ನೋಡುತ್ತೇವೆ. ಈ ರೀತಿಯಲ್ಲಿ ನಾವು ಈ ಮಾರ್ಗದಲ್ಲಿ ಮುಂದುವರೆಯುತ್ತೇವೆ, ಬೆಳೆಯುತ್ತಾ ಹೋಗುತ್ತೇವೆ. ಯಾವುದೇ ಮಟ್ಟದಲ್ಲೂ ನಿಲ್ಲದೆ, ಒಂದೇ ಸಮನೆ ಉನ್ನತವಾದುದನ್ನು ಅರಸುತ್ತಾ ಹೋಗುವುದು ನಮಗೆ ಉಪಯುಕ್ತ.

ಋಷಿಗಳು, ಗುರೂಜಿಯವರ ಮೂಲಕ, ಅಮರಾಜಿಯವರ ಮೂಲಕ ನಮಗೆ ಒದಗಿಸುತ್ತಿರುವ ಜ್ಞಾನ ಮತ್ತು ಚೈತನ್ಯಗಳು ನಾವು ಬೆಳೆಯಲು ಮತ್ತು ಪರಿವರ್ತನೆ ಹೊಂದಲು ಸಹಾಯ ಮಾಡುತ್ತವೆ. ಇಲ್ಲಿ ಪರಿವರ್ತನೆಯೇ ಕೇಂದ್ರ ಬಿಂದು. ಹೆಚ್ಚು ಜ್ಞಾನವನ್ನು ಮತ್ತು ಅನುಭವವನ್ನು ಸಂಗ್ರಹಿಸಿ ಬೆಳೆಯುತ್ತಾ ಹೋದಾಗ ಅದರಿಂದ ನಾವು ಪ್ರಭಾವಿತರಾಗಿ, ಮೂಲಭೂತ ವಿಷಯಗಳಿಂದ ನಮ್ಮ ಗಮನ ದೂರ ಹೋಗುವ ಗಂಡಾಂತರವಿದೆ.

ಮಹಾನ್ ಮಾಸ್ಟರ್‌ಗಳಿಂದ ನಾವು ಕಲಿಯುತ್ತಿರುವುದಕ್ಕಾಗಿ ಮತ್ತು ಅವರಿಂದ ಸ್ಪಷ್ಟ ಮಾರ್ಗದರ್ಶನ ನಮಗೆ ಸಿಗುತ್ತಿರುವುದಕ್ಕಾಗಿ ನಾವು ದೇವರಿಗೆ ವಂದಿಸೋಣ. ಜ್ಞಾನ ಮತ್ತು ಅನುಭವಗಳು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಅಳೆಯುವುದಿಲ್ಲ ಎಂದು ಸ್ಪಷ್ಟವಾಗಿ ಮಾಸ್ಟರ್‌ಗಳು ತಿಳಿಸಿದ್ದಾರೆ. ವಿನಯವಂತಿಕೆಯೇ ನಮ್ಮ ಆಧ್ಯಾತ್ಮಿಕ ಸ್ಥಿತಿಯ ಅಳತೆಗೋಲು ಎಂದು ನಮಗೆ ಅರ್ಥವಾಗಿದೆ.

ನನಗೆ ತಿಳಿದಿರುವಂತೆ, ವಿನಯವಂತಿಕೆಯು ಹೊರನೋಟಕ್ಕೆ ಕಾಣುವ ಮೃದುತ್ವವಲ್ಲ. ನಾವೆಲ್ಲರೂ ದೇವರ ಭಾಗವೇ ಆಗಿದ್ದೇವೆ ಎಂಬ ಆಳವಾದ ಅರಿವಿನಿಂದ ವಿನಯವಂತಿಕೆ ಮೂಡುತ್ತದೆ. ವಿನಯವಂತರು ಮೃದುವಾಗಿರುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಅದು ಹೊರನೋಟಕ್ಕೆ ಕಾಣುವ ಮೃದುತ್ವವಷ್ಟೇ ಅಲ್ಲವೆಂದು ನಾನು ಹೇಳುತ್ತಿದ್ದೇನೆ. ವಿನಯವಂತಿಕೆಯೆಂದರೆ, ಹೊರಗಡೆ ವಿನಮ್ರರಾಗಿ ಕಾಣಿಸಿಕೊಳ್ಳುವುದಲ್ಲ, ಆಂತರಿಕವಾಗಿ ವಿನಮ್ರರಾಗಿರುವುದು. ನಾವು ಒಳಗಡೆ ಏನಾಗಿದ್ದೇವೆಯೋ, ಅದು ಯಾವುದೋ ಒಂದು ರೀತಿಯಲ್ಲಿ ನಮ್ಮ ನಡತೆಯಲ್ಲಿ ಪ್ರಕಟಗೊಳ್ಳುತ್ತದೆ. ಅನೇಕ ವೇಳೆ ನಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತದೆ. ಅದರಿಂದಾಗಿ ಈ ವಿಷಯದಲ್ಲಿ ಸ್ಪಷ್ಟನೆ ನೀಡಲು ಬಯಸಿದ್ದೇನೆ.

ಪ್ರತಿಯೊಬ್ಬರೂ ದೇವರದೇ ಭಾಗವೆಂದು ಅರಿತಾಗ, ಸ್ವಾಭಾವಿಕವಾಗಿಯೇ ನಾವು ಬೇರೆಯವರನ್ನು ಗೌರವಿಸುತ್ತೇವೆ. ಅದು ಸಹಜವಾಗಿ ನಡೆಯುತ್ತದೆ. ಸಹಜವಾಗಿಯೇ ನಾವು ಅವರೊಂದಿಗೆ ಆತ್ಮ ಮಟ್ಟದಲ್ಲಿ ಸಂಪರ್ಕ ಹೊಂದಿರುತ್ತೇವೆ. ಗುರೂಜಿಯವರು ಹಾಗೆಯೇ ಮಾಡುತ್ತಿದ್ದುದನ್ನು ನಾವು ನೋಡಿದ್ದೇವೆ. ಅವರು ಅಂತಹ ಮಹಾನ್ ಮಾಸ್ಟರ್. ನಾವು ಪರಸ್ಪರರನ್ನು ಮಾತನಾಡಿಸುವ ರೀತಿಯಲ್ಲಿ ಗುರೂಜಿಯವರು ದೇವರುಗಳೊಂದಿಗೆ ಮತ್ತು ಋಷಿಗಳೊಂದಿಗೆ ಮಾತನಾಡಬಲ್ಲವರಾಗಿದ್ದರೂ ಅವರು ಅತ್ಯಂತ ಪ್ರಾಮಾಣಿಕವಾಗಿ ನಮ್ಮನ್ನು ಗೌರವಿಸುತ್ತಿದ್ದರು, ಏಕೆಂದರೆ ಯಾವಾಗಲೂ ಅವರು ನಮ್ಮಲ್ಲಿನ ದೈವತ್ವಕ್ಕೆ ಸಂಪರ್ಕಗೊಳ್ಳುತ್ತಿದ್ದರು.

ನಮ್ಮಲ್ಲಿರುವ ಸಾಮರ್ಥ್ಯ, ಜ್ಞಾನ, ಶಕ್ತಿ, ಎಲ್ಲವೂ ಋಷಿಗಳಿಂದ ಬಂದಿದೆಯೆನ್ನುವುದನ್ನು ನೆನಪುಮಾಡಿಕೊಳ್ಳಲು ವಿನಯವಂತಿಕೆ ಸಹಾಯಮಾಡುತ್ತದೆ. ಇವೆಲ್ಲವೂ ದೇವರಿಂದ ಬರುತ್ತದೆ. ಅವೆಲ್ಲವೂ ದೇವರು ನಮಗೆ ಕೊಟ್ಟ ಕೊಡುಗೆ. ದೇವರು ಅದನ್ನು ನಮ್ಮಿಂದ ದೂರ ಮಾಡುವುದಿಲ್ಲ, ಆದರೆ ಅಹಂಗೆ ತಲೆ ಎತ್ತಲು ಅವಕಾಶ ಮಾಡಿಕೊಟ್ಟರೆ ನಾವಾಗಿಯೇ ಅವನ್ನು ಕಳೆದುಕೊಳ್ಳುತ್ತೇವೆ. ಇದು ವಾಸ್ತವ ಸಂಗತಿ. ಆದರೆ ಈ ಕೊಡುಗೆಯು ನನ್ನದಲ್ಲ, ಅದು ದೇವರಿಂದ ಬಂದಿದೆ ಎನ್ನುವುದನ್ನು ನೆನಪುಮಾಡಿಕೊಡಲು ವಿನಯವಂತಿಕೆ ನಮಗೆ ಸಹಾಯಮಾಡುತ್ತದೆ.

ಅದೇ ರೀತಿ, ಕೃತಜ್ಞತೆಯೂ ವಿನಮ್ರತೆಯ ಒಂದು ಭಾಗ. ನಾವು ದೇವರ ಭಾಗವೆಂದು ಇನ್ನೂ ಅರಿತುಕೊಂಡಿಲ್ಲದಿರುವಾಗ ವಿನಮ್ರತೆಯನ್ನು ರೂಢಿಸಿಕೊಳ್ಳುವುದು ಹೇಗೆ ಎಂದು ನಾವು ವಾದಿಸಬಹುದು. 'ವಿನಮ್ರತೆಯನ್ನು ಬೆಳೆಸಿಕೊಳ್ಳಬಹುದೆ?' ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಹಾದು ಹೋಯಿತು. ಅದನ್ನೇ ನಾವಿಲ್ಲಿ ಕಲಿಯಲು ಪ್ರಯತ್ನಿಸುತ್ತಿರುವುದು. ಅದನ್ನು ಬೆಳೆಸಿಕೊಳ್ಳಬಹುದು.

ನಾವು ದೇವರ ಭಾಗವೆಂದು ಅರಿತು-ಕೊಳ್ಳುವಂತಹ ದೊಡ್ಡ ಅನುಭವ ನಮಗೆ ಆಗಿಲ್ಲದಿರಬಹುದು, ಆದರೂ ನಾವು ವಿಷಯಗಳನ್ನು ಗ್ರಹಿಸಬಲ್ಲೆವು. ಬೌದ್ಧಿಕವಾಗಿ ಅದನ್ನು ತಿಳಿದುಕೊಂಡಿದ್ದೇವೆಂದು ನಾವು ಹೇಳಿದರೂ ಕೂಡ ಅದು ಸಂಪೂರ್ಣವಾಗಿ ಬೌದ್ಧಿಕವಲ್ಲವೆಂದು ನನ್ನ ಅನಿಸಿಕೆ. ನಮ್ಮ ಮೂಲದಲ್ಲಿ ನಾವು ಯಾವಾಗಲೂ ಹೊತ್ತಿರುವ ಆಳವಾದ ಅರಿವು ನಮ್ಮ ತಿಳುವಳಿಕೆಗೆ ಬೆಂಬಲ ನೀಡುತ್ತದೆ. ನಮ್ಮ ನಿಜವಾದ ಅಸ್ತಿತ್ವದ ಮತ್ತು ನಮ್ಮ ನಿಜವಾದ ಸ್ವಭಾವದ ಆಳವಾದ ತಿಳುವಳಿಕೆ ನಮ್ಮ ಭಾಗವಾಗಿದೆ. ಅದು ನಮ್ಮ ಅಂತರಂಗದಲ್ಲಿ ಆಳವಾಗಿ ಬೇರು ಬಿಟ್ಟಿದ್ದು ನಮ್ಮ ತಿಳುವಳಿಕೆಗೆ ಸಹಾಯ ಮಾಡುತ್ತದೆ. ಸ್ಪಷ್ಟವಾಗಿ ಮತ್ತು ತರ್ಕಬದ್ಧವಾಗಿ ವಿವರಿಸಲು ನಮಗೆ ಆಗದಿರಬಹುದು, ಆದರೆ ನಮ್ಮ ಅಂತರಾಳದಲ್ಲಿ, ನಾವು ದೇವರ ಭಾಗವೆಂದು ನಮಗೆ ತಿಳಿದಿದೆ.

ಆಧ್ಯಾತ್ಮಿಕ ಬುದ್ಧಿಶಕ್ತಿ ಎಂದು ಗುರೂಜಿಯವರು ಪದೇ ಪದೇ ಪ್ರಸ್ತಾಪಿಸುತ್ತಿದ್ದುದು ಬಹುಶಃ ಇದೇ ಇರಬಹುದು. ವಿಷಯಗಳನ್ನು ಅರ್ಥಮಾಡಿಕೊಳ್ಳಲು ಆಧ್ಯಾತ್ಮಿಕ ಬುದ್ಧಿಶಕ್ತಿ ನಮಗೆ ಸಹಾಯ ಮಾಡುತ್ತದೆಂದು ಅವರು ಹೇಳುತ್ತಿದ್ದರು. ಆಧ್ಯಾತ್ಮಿಕ ವಾಸ್ತವಗಳನ್ನು ಅರ್ಥಮಾಡಿಕೊಳ್ಳಲು ಬುದ್ಧಿ ಮಾತ್ರವಲ್ಲದೆ, ಬುದ್ಧಿಯನ್ನು ಮೀರಿದ ಮತ್ತಾವುದೋ ನಮಗೆ ಸಹಾಯ ಮಾಡುತ್ತದೆ.

ನಮ್ಮ ಮತ್ತು ಇತರರ ನಿಜವಾದ ಸ್ವಭಾವದ ಅರಿವಿಗೆ ಆಧ್ಯಾತ್ಮಿಕ ಬುದ್ಧಿಶಕ್ತಿ ನಮಗೆ ಸಹಾಯ ಮಾಡುತ್ತದೆ. ನಮಗೆ ಇದರ ಅರಿವಿದ್ದರೆ ಸಹಜವಾಗಿಯೇ ನಾವು ವಿನಯದಿಂದಿರುತ್ತೇವೆ.

ಅಧ್ಯಾತ್ಮಿಕತೆ ಜೀವನದ ವಿವರಗಳಲ್ಲಿರುತ್ತದೆ. ಇವು ಗುರೂಜಿಯವರ ಮಾತುಗಳು, ನನ್ನ ಮಾತುಗಳಲ್ಲ. ಅವರೊಬ್ಬ ಮಾಸ್ಟರ್. ಅವರು ಪರಿಪೂರ್ಣತೆಯೇ ಮೈವೆತ್ತಂತಿದ್ದರು. ಉದಾಹರಣೆಗೆ, ನಿಗದಿತ ಸಮಯದಲ್ಲಿ ಭೇಟಿಮಾಡುವುದಾಗಿ ನಾವು ಯಾರಿಗಾದರೂ ಮಾತು ಕೊಟ್ಟಿದ್ದರೆ ಅಥವ ಯಾರಿಗಾದರೂ ಮತ್ತಾವುದೇ ವಾಗ್ದಾನ ಮಾಡಿದ್ದರೆ, ನಿಜವಾಗಿಯೂ ನಾವು ಕೊಟ್ಟ ಮಾತಿನಂತೆ ನಡೆಯುತ್ತೇವೆಯೇ? ಅದಕ್ಕೆ ಬಹಳ ಬೆಲೆಯಿದೆ.

ಗುರೂಜಿಯವರು ಸ್ಥಾಪಿಸಿರುವ ಈ ವ್ಯವಸ್ಥೆಯನ್ನು ನಾವು ಗೌರವಿಸುತ್ತೇವೆಯೇ? ವ್ಯವಸ್ಥೆಯನ್ನು ಗೌರವಿಸುವುದಾದರೆ, ನಾವು ನಮ್ಮ ವರದಿಯನ್ನು ಸಮಯಕ್ಕೆ ಸರಿಯಾಗಿ ಕೊಡುತ್ತೇವೆ. ಅಧ್ಯಾತ್ಮಿಕತೆ ಈ ವಿವರಗಳಲ್ಲಿದೆ. ನಾವು ವ್ಯವಸ್ಥೆಯನ್ನು ಗೌರವಿಸುವುದಾದರೆ, ನಮ್ಮ ಫೀ ಅನ್ನು ಸಮಯಕ್ಕೆ ಸರಿಯಾಗಿ ಭರಿಸುತ್ತೇವೆ; ನಮ್ಮ ದೂರ ಕಲಿಕೆಯ ನೋಂದಣಿಯನ್ನು ಸಮಯಕ್ಕೆ ಸರಿಯಾಗಿ ನವೀಕರಿಸುತ್ತೇವೆ. ಚೆಕ್–ಅಪ್‌ಗೆ ಸಮಯಕ್ಕೆ ಸರಿಯಾಗಿ ಹಾಜರಾಗುತ್ತೇವೆ. ಇವೆಲ್ಲವೂ ಮುಖ್ಯವಾಗುತ್ತವೆ. ನಾವು ವ್ಯವಸ್ಥೆಯನ್ನು ಗೌರವಿಸುವುದಾದರೆ, ಸಮಯಕ್ಕೆ ಸರಿಯಾಗಿ ನಮ್ಮ ಹೆಸರುಗಳನ್ನು ನೋಂದಾಯಿಸುತ್ತೇವೆ. ಪ್ರಾಮಾಣಿಕತೆ ಅಧ್ಯಾತ್ಮಿಕರಾಗಿರುವುದರ ಒಂದು ಭಾಗ. ನಮಗೆ ಬಹಳ ದೊಡ್ಡ ಅನುಭವಗಳಾಗಿರಬಹುದು ಆದರೆ ಈ ಮೂಲಭೂತವಾದವುಗಳನ್ನು ಆಚರಿಸಲು ನಮಗೆ ಸಾಧ್ಯವಾಗದಿದ್ದರೆ, ನಾವು ಅಧ್ಯಾತ್ಮಿಕವಾಗಿ ಬೆಳೆದಿದ್ದೇವೆಂದು ಹೇಳಿಕೊಳ್ಳಲು ಹೇಗೆ ಸಾಧ್ಯ? ಆಧ್ಯಾತ್ಮಿಕರಾಗಿರುವುದೆಂದರೆ ಗಂಟೆಗಟ್ಟಲೆ ಧ್ಯಾನ ಮಾಡುವುದಷ್ಟೇ ಅಲ್ಲ, ಅದು ಈ ಮೂಲಭೂತವಾದವುಗಳನ್ನು ಅನುಸರಿಸುವುದೂ ಆಗಿದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ – ಆಂತರಿಕ ಪ್ರಪಂಚ

**ಹೇಮಲತಾ ಪ್ರಮೋದ್ ; ಅನು: ಪಾಂಡುರಂಗ**

ಗುರೂಜಿಯವರು ಭೌತಿಕ ಪ್ರಪಂಚವನ್ನು ಬಿಟ್ಟು ಅಗಲಿದಾಗ, ನಮಗೆಲ್ಲರಿಗೂ 'ಪ್ರಪಂಚ ಕೊನೆಗೊಂಡಿತು' ಎಂಬ ಭಾವನೆ ಮೂಡಿತ್ತು. ನಾವು ಯಾವಾಗಲೂ "ಪ್ರಪಂಚ" ಅನ್ನುವುದು ಎಲ್ಲೋ ಹೊರಗಡೆ ಇದೆ ಎಂದು ತಿಳಿದುಕೊಂಡಿದ್ದೆವು. ಒಬ್ಬ ವ್ಯಕ್ತಿಯೇ ಪ್ರಪಂಚ ಆಗಬಹುದೆಂದು ನಾವು ಯಾವತ್ತೂ ಊಹಿಸಿರಲಿಲ್ಲ. ಗುರೂಜಿಯೇ ಪ್ರಪಂಚವಾಗಿದ್ದರೆಂದು, ನಮ್ಮ ಸಣ್ಣತನಕ್ಕೆ ಅರಿವಾಗಲೇ ಇಲ್ಲ. ಕೇವಲ ಈ ಮಾರ್ಗದಲ್ಲಿ ಇದ್ದರೂ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಗುರೂಜಿಯವರನ್ನು ನಮ್ಮ ಹೃದಯ ಮಂದಿರದಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತೇವೆ. ನಮ್ಮ ಅಹಂ ನಮ್ಮನ್ನು ದೂರ ಎಳೆದುಕೊಂಡು ಹೋಗಲು ಪ್ರಯತ್ನಿಸಿದಾಗ, ನಮ್ಮ ಆತ್ಮವು ಗುರೂಜಿಯವರ ಜೊತೆ ಸಂಪರ್ಕದಲ್ಲಿರುವಂತೆ ನೋಡಿಕೊಳ್ಳುತ್ತದೆ. ನಮ್ಮ ಆಂತರ್ಯದಲ್ಲಿ ನಾವು ಹೊಂದಿರುವ ಪ್ರಪಂಚವೇ ಗುರೂಜಿ.

ಪ್ರತಿ ದಿನ ನಮ್ಮ ಜೀವನದ ಕ್ಷೋಭೆ ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸುವಾಗಲೂ, ನಮ್ಮ ಹೃದಯದ ಯಾವುದೋ ಒಂದು ಭಾಗದಲ್ಲಿ ಗುರೂಜಿ ನಮಗೆ ಸಹಾಯ ಮಾಡುತ್ತಾರೆ ಎಂಬ ಅರಿವಿನಿಂದ ಇರುತ್ತೇವೆ. ಒಮ್ಮೆ ಗುರೂಜಿ ಹೇಳಿದ್ದರು "ನಾನು ನಿಮ್ಮೆಲ್ಲರಿಂದ ಹೆಚ್ಚು ದೂರವಾದಾಗಲೆಲ್ಲ ನಿಮಗೆ ಹೆಚ್ಚು ಹತ್ತಿರವಾಗಿರುತ್ತೇನೆ." ಈ ರೀತಿಯ ಅನುಭವ ನಮ್ಮಲ್ಲಿ ಅನೇಕರಿಗೆ ಆಗಿದೆ. ನಮ್ಮ ತಪ್ಪು ಆಯ್ಕೆಗಳು ಮತ್ತು ಪ್ರಮಾದಗಳೇ ನಮ್ಮ ಸಮಸ್ಯೆಗಳಿಗೆ ಕಾರಣವಾಗಿದ್ದರೂ, ನಮ್ಮ ವೈಯಕ್ತಿಕ ಜೀವನದ ಪ್ರತಿಯೊಂದು ವಿಷಯದಲ್ಲೂ ಗುರೂಜಿ ನಿಮಿಷ ನಿಮಿಷಕ್ಕೂ ಸಹಾಯ ಮಾಡುತ್ತಿದ್ದಾರೆ ಎಂಬ ಅನುಭವ ಹೃದಯವನ್ನು ತಟ್ಟುತ್ತದೆ.

"ಬೆಳಕಿಗೆ ಬಾಗಿಲುಗಳು" ಪುಸ್ತಕದ ಕೆಲವು ಸಾಲುಗಳನ್ನು ಸುಮ್ಮನೆ ಓದಿದರೂ ಸಾಕು, ನಮಗೆ ಎಲ್ಲವೂ ಸುಖಾಂತವಾಗುತ್ತದೆ ಎಂಬ ಆಶಾಭಾವ ಮತ್ತು ಭರವಸೆ ಮೂಡಿಸುತ್ತದೆ. ಗುರೂಜಿಯವರು ಸಾಗಿ ಬಂದ ಅವರ ಜೀವನದ ಹೋರಾಟಗಳ ಮುಂದೆ, ನಮ್ಮದು ಹೋರಾಟವೇ ಅಲ್ಲ. ಇವು ನಮ್ಮನ್ನು ಶಕ್ತಿವಂತರನ್ನಾಗಿ ಮಾಡುವ ಪರೀಕ್ಷೆಗಳು. ಈ ಪರೀಕ್ಷೆಗಳು ಜೀವನದಲ್ಲಿ ಮುನ್ನುಗ್ಗುವ ಧೈರ್ಯ ಮತ್ತು ಭರವಸೆಗಳನ್ನು ತಂದು ಕೊಡುತ್ತವೆ. ಅಪಾರ ಶಕ್ತಿ ಸಾಮರ್ಥ್ಯಗಳಿದ್ದರೂ ಗುರೂಜಿಯವರಂತಹ ಮಾಸ್ಟರ್‌ಗಳು ಇಡೀ ಮನುಕುಲಕ್ಕೆ ಮಾದರಿಯಾಗುವುದಕ್ಕಾಗಿ ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಜೀವನ ನಡೆಸುತ್ತಾರೆ. ಮಾಸ್ಟರ್‌ಗಳು ಬದುಕಿದ್ದಾಗ, ಬಹಳಷ್ಟು ಜನರು ಅವರನ್ನು ಅರ್ಥ ಮಾಡಿಕೊಳ್ಳುವುದಿಲ್ಲ.

ನಮ್ಮ ಗುರೂಜಿಯವರನ್ನು ಇನ್ನೂ ಹೆಚ್ಚು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಗುರೂಜಿಯವರ ಆಶೀರ್ವಾದ ಮತ್ತು ಪ್ರೀತಿಯ ಅನುಭವವನ್ನು ಇನ್ನೂ ಹೆಚ್ಚು ಪಡೆಯಬೇಕು. ಅವರ ಸಂಪರ್ಕಕ್ಕೆ ಬರುವುದಕ್ಕೆ ನಮಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾವು ಕೃತಜ್ಞರಾಗಿರಬೇಕು. ಕಾರಣ ಇವತ್ತು ನಾವು ಏನಾಗಿದ್ದೇವೆಯೋ ಅದಕ್ಕೆ ಗುರೂಜಿಯವರ ಆಶೀರ್ವಾದ ಮತ್ತು ಅವರ ಬೇಷರತ್ ಪ್ರೀತಿಯೇ ಕಾರಣ. ಇದೇ ನಾವು ಗುರೂಜಿಯವರಿಗೆ ಕೊಡಬಹುದಾದ ಉತ್ತಮ ಕಾಣಿಕೆ. ■

## ಪ್ರೀತಿಗೊಂದು ದ್ವಾರ

**ಕಾರ್ತಿಕ್ ಎನ್; ಅನು: ವರ್ಷಾ ದೀಪಕ್**

ಮಹಾನ್ ಕವಿಗಳು ಅಚೇತನಕ್ಕೆ ಜೀವ ತುಂಬಿ ಅವು ನಮ್ಮ ಜೀವನದಲ್ಲಿ ಮಿಡಿಯುವಂತೆ ಮಾಡುತ್ತಾರೆ. ಮಹಾನ್ ಚಿಂತಕರು ನಮ್ಮ ಸೃಜನಾತ್ಮಕತೆಗೆ ರೆಕ್ಕೆಗಳನ್ನು ಮೂಡಿಸಿ ಹೊಸತನವನ್ನು ಹೊರತರುತ್ತಾರೆ. ಮಹಾನ್ ಚಿತ್ರಕಲಾವಿದರು ಕ್ಯಾನ್ವಾಸ್‌ನ ಕಡು ಬಣ್ಣಗಳನ್ನು ನಮ್ಮ ಜೀವನದಲ್ಲಿ ಎರಚಿ, ನಮ್ಮ ಮನಸ್ಸುಗಳಲ್ಲಿ ಕಲ್ಪನೆಯ ಸೂಕ್ಷ್ಮ ಎಳೆಗಳನ್ನು ಹೆಣೆಯುತ್ತಾರೆ. ಹಾಗೂ ಮಹಾನ್ ಸಂಗೀತಗಾರರು ನಮ್ಮನ್ನು ಉತ್ಕಟವಾದ ಭಾವುಕತೆಯಲ್ಲಿ ಮತ್ತು ಉನ್ನತ ಅವಸ್ಥೆಗಳಲ್ಲಿ ಮೈ ಮರೆಸುತ್ತಾರೆ. ಜೀವನದ ಎಲ್ಲಾ ಅಂಶಗಳಲ್ಲೂ ಅಂತಹ ಮಹಾನ್ ವ್ಯಕ್ತಿಗಳು ತಾತ್ಕಾಲಿಕವಾಗಿಯಾದರೂ ನಮ್ಮನ್ನು ಬದುಕಿನ ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತಾರೆ.

ಗುರೂಜಿಯವರು ಕೂಡಾ ಅಂತಹ ಉನ್ನತ ಮಟ್ಟಕ್ಕೆ ನಮ್ಮನ್ನು ಮೇಲೆತ್ತುವ ಓರ್ವ ಮಾಸ್ಟರ್ ಆಗಿದ್ದಾರೆ. ಆ ಸ್ಥಿತಿಗಳನ್ನೂ ಮೀರಿದ ಇನ್ನೂ ಉನ್ನತ ಸ್ಥಿತಿಗಳಾದ ಪರಿಶುದ್ಧತೆ ಮತ್ತು ಶಾಂತತೆಯೆಡೆಗೆ ಹೋಗುವಲ್ಲಿ ಸಹಕರಿಸಲು ಮತ್ತು ಆ ಸ್ಥಿತಿಗಳಲ್ಲಿ ದೀರ್ಘಸಮಯ ಕಳೆಯಲು ಅವರು ನಮಗೆ ಧ್ಯಾನವನ್ನು ಹೇಳಿಕೊಟ್ಟರು! ವಿಶ್ವದ ಕೇಂದ್ರಬಿಂದುವಾದ ಶುದ್ಧವಾದ ದೈವೀ ಪ್ರೀತಿಯ ರೂಪದಲ್ಲಿ ಇವೆಲ್ಲದರ ತಿರುಳನ್ನು ಹರಡುವಂತಹ ಒಬ್ಬ ಮಹಾನ್ ಮಾಸ್ಟರ್ ಅವರಾಗಿದ್ದರು. ಎಲ್ಲಾ ಮಹಾನ್ ಕಲಾವಿದರು, ಸಂಗೀತಗಾರರು ಮತ್ತು ವಿಜ್ಞಾನಿಗಳು ಆ ಪ್ರೀತಿಯನ್ನು ತಮ್ಮ ಕೆಲಸಗಳ ಮೂಲಕ ಅಭಿವ್ಯಕ್ತಿಸುತ್ತಾರೆ. ಗುರೂಜಿಯವರು ತಮ್ಮ ಅಂತರಾಳದಲ್ಲಿ ಆ ದೈವೀ ಪ್ರೀತಿಯನ್ನೇ ಅದರ ಪರಿಶುದ್ಧವಾದ ರೂಪದಲ್ಲಿ ಹೊಂದಿದ್ದು, ಪ್ರತಿಯೊಬ್ಬರಿಗೂ ಅದನ್ನು ಹರಡುವ ಒಬ್ಬ ಮಹರ್ಷಿಯಾಗಿದ್ದರು. ಪ್ರೀತಿಯ ಈ ಕಂಪನಗಳು ನಮ್ಮ ವ್ಯಕ್ತಿತ್ವದ ಎಲ್ಲಾ ಮುಖಗಳನ್ನೂ ಉತ್ತಮಗೊಳಿಸಿ ನಮ್ಮೊಳಗಿನ ಕಲಾವಿದನನ್ನು, ಸಂಗೀತಗಾರನನ್ನು ಮತ್ತು ತತ್ವಜ್ಞಾನಿಯನ್ನು ಪ್ರೇರೇಪಿಸುತ್ತವೆ.

ಗುರೂಜಿಯವರನ್ನು ವೈಯಕ್ತಿಕವಾಗಿ ಭೇಟಿಯಾದ ಅಥವಾ ಅವರ ಬಗ್ಗೆ ಕೇಳಿ ತಿಳಿದ ಅಥವಾ ಅವರ ಪುಸ್ತಕಗಳನ್ನು ಓದಿದ ಪ್ರತಿಯೊಬ್ಬರೂ ಸ್ವಲ್ಪ ಮಟ್ಟಿಗಾದರೂ ಆಳವಾದುದು ಮತ್ತು ದಿವ್ಯವಾದುದೇನನ್ನಾದರೂ ಅನುಭವಿಸಿರುತ್ತಾರೆ. ಕೆಲವರು ಭಾವುಕತೆಯ ಉನ್ನತಮಟ್ಟವನ್ನು ತಲುಪಿರುತ್ತಾರೆ, ಕೆಲವರಲ್ಲಿ ನವೀನ ಕಲ್ಪನೆಗಳ ಚಿಲುಮೆ ಹೊರಹೊಮ್ಮಲು ಆರಂಭವಾಗುತ್ತದೆ, ಅನೇಕರು ಮೌನದಲ್ಲಿ ಸ್ಫೂರ್ತಿಯನ್ನು ಪಡೆಯುತ್ತಾರೆ, ಮತ್ತನೇಕರು ವಿವರಣಾತೀತ ಸಂತೋಷವನ್ನು ಅನುಭವಿಸುತ್ತಾರೆ ಹಾಗೂ ಕೆಲವರು ಅವರ ಸಮ್ಮುಖದಲ್ಲಿ ಸಮಾಧಿಯನ್ನು ಕೂಡಾ ಅನುಭವಿಸುತ್ತಾರೆ! ಗುರೂಜಿಯವರು ಉನ್ನತ ಮಟ್ಟದ ಜೀವನದ ಓರ್ವ ಧಾರಕರಾಗಿದ್ದಾರೆ, ಉನ್ನತ ಜೀವನಕ್ಕೆ 'ದ್ವಾರ' ವಾಗಿದ್ದಾರೆ. ಅವರು ನಮ್ಮಲ್ಲಿ ದೈವತ್ವದ ಅಂಶವನ್ನು ಹೆಚ್ಚಿಸಿದ್ದಾರೆ ಮತ್ತು ನಮ್ಮ ವ್ಯಕ್ತಿತ್ವದ ಎಲ್ಲಾ ಅಂಶಗಳನ್ನೂ ಕೂಡಾ ಬೇರೆ ಬೇರೆ ಪ್ರಮಾಣಗಳಲ್ಲಿ ಹೆಚ್ಚಿಸಿದ್ದಾರೆ. ನಾವು ಅವರ ಪ್ರೀತಿಯನ್ನು ಹೆಚ್ಚು ಹೆಚ್ಚು ಪಡೆಯೋಣ ಮತ್ತು 'ದ್ವಾರ' ದೊಳಗೆ ಹೆಜ್ಜೆಯನ್ನಿಡೋಣ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಹೊಸ ಯುಗದಲ್ಲಿ 'ಮಾಯೆ'ಯ ಪಾತ್ರವೇನು?**

ಉ: ಎಲ್ಲಾ ಯುಗಗಳಲ್ಲಿ ಮಾಯೆಯ ಕೆಲಸ ಒಂದೇ ರೀತಿಯದಾಗಿರುತ್ತದೆ. ನೆನಪಿನಲ್ಲಿರಲಿ, ಮಾಯೆ ಒಂದು ವರ. ಅದು ಯಾವತ್ತೂ ಒಂದು ಶಾಪ ಅಲ್ಲ. ಅದು ಎಂದೂ ಮಿತಿಯುಂಟುಮಾಡುವುದಿಲ್ಲ. ಸೃಷ್ಟಿಸಲಾದ ಎಲ್ಲವನ್ನೂ ಯಥಾವತ್ತಾಗಿ ನೋಡುವ ಸಾಮರ್ಥ್ಯವೇ ಮಾಯೆ ಎಂದು ಋಷಿಗಳು ವಿವರಿಸಿದ್ದಾರೆ.

**ಪ್ರ: ಭಗವಾನ್ ಕಲ್ಕಿ ಯಾವಾಗ ಕಾಣಿಸಿಕೊಂಡು ಕಲಿಯುಗದ ಅಂತ್ಯವನ್ನು ಬಹಿರಂಗ ಪಡಿಸುತ್ತಾರೆ?**

ಉ: ಕಲಿಯುಗ ಕೊನೆಗೊಂಡಿದೆ ಎಂದು ಈಗಾಗಲೇ ತಿಳಿಸಿದ್ದಾರೆ. 1974ನೇ ಇಸವಿಯಲ್ಲಿ ಕಲಿಯುಗ ಕೊನೆ ಗೊಂಡಿದೆ ಎಂದು ಅಮರರವರು ನಮಗೆ ಹೇಳಿದ್ದಾರೆ.

**ಪ್ರ: ನಮ್ಮ ಹಿಂದಿನ ಜನ್ಮಗಳಲ್ಲಿ ನಾವು ಋಷಿಗಳ ಕೆಲಸವನ್ನು ಆಯ್ಕೆ ಮಾಡಿಕೊಂಡಿದ್ದೆವು ಮತ್ತು ಈ ಜನ್ಮದಲ್ಲೂ ಅವರಿಗಾಗಿ ಕೆಲಸ ಮಾಡಬೇಕು ಎಂಬ ವಿಷಯದ ಅರಿವನ್ನು ನಾವು ಕಳೆದುಕೊಂಡದ್ದು ಹೇಗೆ?**

ಉ: ಮೊದಲ ಬಾರಿ ನಾವು ಇಲ್ಲಿ ಜನ್ಮ ಪಡೆದಾಗ, ಋಷಿಗಳ ಕೆಲಸ ಮಾಡಬೇಕೆಂಬ ನಮ್ಮ ಆಯ್ಕೆಯ ಅರಿವು ನಮಗಿರುತ್ತದೆ. ಆದರೆ ನಂತರದ ಜನ್ಮಗಳಲ್ಲಿ ನಾವು ಇದನ್ನು ನೆನಪಿಸಿಕೊಳ್ಳುವುದಿಲ್ಲ. ಕಾರಣ, ಹಿಂದಿನ ಜನ್ಮದ ನೆನಪಿನ ಕೋಶಗಳನ್ನು ತಡೆಹಿಡಿದಿರುತ್ತಾರೆ. ನಮ್ಮ ಆಯ್ಕೆಯ ಬಗ್ಗೆ ಬೇರೊಂದು ಮಟ್ಟದಲ್ಲಿ ನಮಗೆ ಅರಿವಿರುತ್ತದೆ ಮತ್ತು ನಾವು ಅದನ್ನು ಅನುಸರಿಸುತ್ತಿರುತ್ತೇವೆ. ಇಲ್ಲಿ ಮತ್ತೊಂದು ಅಂಶವಿದೆ. ಪ್ರತಿ ಬಾರಿ ನಾವು ಹುಟ್ಟಿದಾಗ, ದೇವರು ನಮ್ಮ ಇಚ್ಛಾ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸಲು ಅನುವು ಮಾಡಿಕೊಟ್ಟಿದ್ದಾನೆ. ಪ್ರತಿ ಕ್ಷಣದಲ್ಲೂ ನಾವು ಆಯ್ಕೆ ಮಾಡಿಕೊಳ್ಳುತ್ತಿರಬೇಕು. ಈ ಕಾರಣಗಳಿಂದಾಗಿ ನಮ್ಮ ಮೊದಲ ಆಯ್ಕೆಯ ಅರಿವು ನಮಗಿರುವುದಿಲ್ಲ.

**ಪ್ರ: ಈ ಅರಿವನ್ನು ನಾವು ಕೊನೆಯವರೆಗೂ ಉಳಿಸಿಕೊಳ್ಳುವುದು ಹೇಗೆ?**

ಉ: ಸದ್ಯಕ್ಕೆ ಇದು ಸಾಧ್ಯವಿಲ್ಲ. ಆದರೆ ಒಂದು ವೇಳೆ ನೀವು ದೃಢವಾದ ಬದ್ಧತೆ ಹೊಂದಿದ್ದರೆ, ನಿಮಗೆ ಅದರ ನೆನಪು ಇಲ್ಲದಿದ್ದರೂ, ನೀವು ಯಾವಾಗಲೂ ಋಷಿಗಳ ಹತ್ತಿರ ಬರುತ್ತೀರಿ. ನಾವು ಹೊಸಯುಗದೆಡೆಗೆ ಮುಂದುವರಿದಂತೆ, ನಮ್ಮ ಎಲ್ಲ ಜನ್ಮಗಳ ನೆನಪುಗಳು ನಮ್ಮಲ್ಲಿ ಉಳಿದುಕೊಂಡಿರುತ್ತವೆ.

**ಪ್ರ: ಧ್ಯಾನ ಮತ್ತು ದೀಕ್ಷೆ ಸಮಯಗಳಲ್ಲಿ ಪಡೆದ ಚೈತನ್ಯಗಳನ್ನು ನಾವು ಹೇಗೆ ಬಳಸಿಕೊಳ್ಳಬಹುದು?**

ಉ: ಆಧ್ಯಾತ್ಮಿಕವಾಗಿ ಬೆಳೆಯಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದಾಗಲೆಲ್ಲ ಈ ಚೈತನ್ಯಗಳು ನಮಗೆ ಸಹಾಯ ಮಾಡುತ್ತವೆ. ಈ ಚೈತನ್ಯಗಳು ಕೆಲಸ ಮಾಡುತ್ತಿರುತ್ತವೆ – ಅವು ನಮ್ಮನ್ನು ಪರಿಶುದ್ಧಗೊಳಿಸುತ್ತವೆ, ನಮ್ಮೆಲ್ಲ ಯೋಚನೆಗಳು ಮತ್ತು ಭಾವನೆಗಳನ್ನು ಸಕಾರಾತ್ಮಕಗೊಳಿಸುತ್ತವೆ, ನಮ್ಮ ಶಾರೀರಿಕ ವ್ಯವಸ್ಥೆಯು ದೇವರ ಜೊತೆಗೆ ಶ್ರುತಿಗೊಳ್ಳುವಂತೆ ಮಾಡುತ್ತವೆ, ನಾವು ಆರೋಗ್ಯದಿಂದ ಇರುವಂತೆ ಮಾಡುತ್ತವೆ. ಆದರೆ ಪ್ರಜ್ಞಾಪೂರ್ವಕವಾಗಿ ನಾವು ಈ ಚೈತನ್ಯಗಳನ್ನು ಬಳಕೆ ಮಾಡಲಾಗುವುದಿಲ್ಲ. ಈ ಚೈತನ್ಯಗಳನ್ನು ಒಂದು ಉದ್ದೇಶಕ್ಕಾಗಿ ನಮಗೆ ಕೊಡಲಾಗಿದೆ, ಈ ಚೈತನ್ಯಗಳಿಗೆ ಅದು ತಿಳಿದಿರುತ್ತದೆ ಮತ್ತು ಆ ಉದ್ದೇಶಕ್ಕಾಗಿಯೇ ಅವು ಕೆಲಸ ಮಾಡುತ್ತಿರುತ್ತವೆ.

**ಪ್ರ: ಸ್ವತಃ ಸಪ್ತ ಋಷಿಗಳು ಜನ್ಮ ತಳೆದು, ನಮಗೆ ಧ್ಯಾನ ಕಲಿಸುವುದಿಲ್ಲ ಏಕೆ?**

ಉ: ಅವಶ್ಯವಿದ್ದಾಗ ಅವರು ಜನ್ಮ ತಾಳುತ್ತಾರೆ. ಹಾಗೂ ನಮಗೆ ಧ್ಯಾನ ಕಲಿಸಿಕೊಡುವುದಕ್ಕೋಸ್ಕರ ಅವರು ಜನ್ಮ ತಾಳುವ ಅವಶ್ಯಕತೆಯಿಲ್ಲ. ನೇರವಾಗಿ ಅಲ್ಲದಿದ್ದರೂ, ಅವರ ಪ್ರತಿನಿಧಿಗಳ ಮೂಲಕ ನಮ್ಮನ್ನು ಗಮನಿಸುತ್ತಿರುತ್ತಾರೆ. ಅವರ ಮಾನವ ಚಾನಲ್‌ಗಳ ಮೂಲಕ ನಮಗೆ ಕಲಿಸುತ್ತಾರೆ.

**ಪ್ರ: ಮೊದಲ ಬಾರಿಗೆ ನಮ್ಮ ಜೊತೆಗೆ ಋಷಿಗಳೂ ಜನ್ಮ ತಾಳಿದರು, ಆದರೆ ಅವರು ಎಲ್ಲೆಮೀರಿ ಕರ್ಮಗಳನ್ನು ಮತ್ತು ಅನುಭವಗಳನ್ನು ಪಡೆಯಲಿಲ್ಲ ಎಂದು ಹೇಳಲಾಗಿದೆ. ಅವರು ಇದನ್ನು ಹೇಗೆ ಸಾಧಿಸಿದರು?**

ಉ: ಎಲ್ಲೆಮೀರಿದ ಅನುಭವಗಳು ನಾವು ಮತ್ತೆ ಹುಟ್ಟಿ ಬರುವಂತೆ ಮಾಡುತ್ತವೆ ಎಂದು ನಮಗೆ ತಿಳಿದಿರುವಂತೆ, ಅವರಿಗೂ ತಿಳಿದಿದೆ. ಆದ ಕಾರಣ ಅವರು ಹೆಚ್ಚಿನ ಅನುಭವಗಳ ಪ್ರಲೋಭನೆಗೆ ಒಳಗಾಗಲಿಲ್ಲ. ಅವರು ಹೆಚ್ಚಿನ ಅನುಭವಗಳನ್ನು ಪಡೆಯಲಿಲ್ಲ. ಅಲ್ಲದೆ ಅವರು ಧ್ಯಾನದ ತಂತ್ರಗಳನ್ನೂ ಕಂಡುಹಿಡಿದರು. ಅವರು ಧ್ಯಾನ ಮಾಡಿದರು, ನಾವು ಮಾಡಲಿಲ್ಲ. ನಾವು ಅನುಭವಿಸುವುದಕ್ಕೆ ಪ್ರಾರಂಭಿಸಿದೆವು. ಆದಕಾರಣ ನಾವು ಇಲ್ಲೇ ಇದ್ದೇವೆ, ಅವರು ಅಲ್ಲಿ ಇದ್ದಾರೆ.

**ಪ್ರ: ಆತ್ಮದ ಮೂಲವನ್ನು ನಾವು ತಿಳಿಯುವುದು ಹೇಗೆ?**

ಉ: ಅದನ್ನು ತಿಳಿಯುವುದಕ್ಕೆ ಸಾಧ್ಯವಿಲ್ಲ.


**ಪ್ರ: ಸಮಯ ಎಂದರೆ ಏನು?**

ಉ: ಅದೊಂದು ಆಯಾಮ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



**ಗುರೂಜಿ ಕೃಷ್ಣಾನಂದ (1939 - 2012)**

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ**

ಒಂದು ಭಾನುವಾರ ಗುರೂಜಿಯವರ ಮಾತುಗಳನ್ನು ಕೇಳುತ್ತಿದ್ದಾಗ, ಸೂಕ್ಷ್ಮಮಟ್ಟದಲ್ಲಿ ನನ್ನೊಡನೆ ಮತ್ತೊಬ್ಬ ಯುವ ಧ್ಯಾನಿ ಇರುವುದನ್ನು ನೋಡಿದೆ. ನಂತರ ನಮ್ಮ ಮುಂದೆ ಮಹರ್ಷಿ ಅಮರರವರನ್ನು ನೋಡಿದೆ. ಅವರು ಒಂದು ಬೃಹತ್ ಹೊಂಬಣ್ಣದ ಬೆಳಕಾಗಿ ಪರಿವರ್ತನೆಯಾದರು. ನಾವು ಅವರಿಂದ ಆ ಬೆಳಕನ್ನು ಪಡೆದುಕೊಂಡೆವು. ನಂತರ ನಾವು ಅವರಲ್ಲಿ ವಿಲೀನರಾದೆವು ಮತ್ತು ನಾನು ಇಡೀ ವಿಶ್ವದ ಅನುಭವ ಪಡೆದೆ. ಅಲ್ಲಿ ಅನಂತ ವಿಸ್ತರಣೆ ಇದ್ದು, ಆ ಮಟ್ಟದಲ್ಲಿ, ನನ್ನಲ್ಲಿ ಕೆಲವು ದಿನಗಳಿಂದ ಇದ್ದ ಭೌತಿಕ ನೋವುಗಳನ್ನೆಲ್ಲ ಮರೆತೆ.

– ರಾಖೀ ಚೋಪ್ರ

ನನ್ನ ದಿನ ನಿತ್ಯದ ಜೀವನದಲ್ಲಿ ಕಷ್ಟಕರವೆನಿಸಿದರೂ, ಜೀವನದಲ್ಲಿ ಎದುರಾಗುವ ಪರಿಸ್ಥಿತಿಗಳಿಗೆ ಸ್ಪಂದಿಸದಿರಲು ಪ್ರಯತ್ನಿಸುತ್ತಿದ್ದೇನೆ ನಾನು ಜಾರಿದ ಕ್ಷಣಗಳೂ ಇವೆ, ಆಗ ನನಗೇ ನನ್ನ ಬಗ್ಗೆ ನಾಚಿಕೆಯೆನಿಸುತ್ತದೆ. ನನಗೆ ಬೆಳಕಿನ ಶಕ್ತಿಯ ಅನುಭವವಾಗಿದೆ. ಇದು ಒಂದು ಶಕ್ತಿಶಾಲಿ ಉಪಕರಣವೆಂದು ನನಗನಿಸುತ್ತದೆ ಹಾಗೂ ಅಂತಹ ಅದ್ಭುತವಾದ ಬೆಳಕಿನಿಂದಾಗಿ ನಾನು ವಿನಮ್ರಳಾಗಿದ್ದೇನೆ.

– ಚಿತ್ರಲೇಖ ಶಾಲೋಮ್

ದೊಂಬಿವಾಲಿಯಿಂದ ಪುಣೆಗೆ ಪ್ರಯಾಣ ಮಾಡಲು ನಮಗೆ ಬೇಕಾದ ರೈಲಿನಲ್ಲಿ ಸ್ಥಳ ಕಾದಿರಿಸಲಾಗಲಿಲ್ಲ. ಹಾಗಾಗಿ ನಾನು ಹಿಂದಿನ ದಿನವೇ ಪ್ರಯಾಣಿಸಿದೆ. ನನ್ನ ಪತಿ ಬಸ್ಸಿನಲ್ಲಿ ಬಂದರು. ನಂತರ ನಾವು ಪ್ರಯಾಣಿಸಬೇಕೆಂದುಕೊಂಡಿದ್ದ ರೈಲನ್ನು ಉದ್ರಿಕ್ತರ ಗುಂಪೊಂದು ಅನೇಕ ಗಂಟೆಗಳವರೆಗೆ ತಡೆದು ನಿಲ್ಲಿಸಿದ್ದ ವಿಷಯ ತಿಳಿಯಿತು!! ಆಶ್ಚರ್ಯವೆಂದರೆ, ನಾವು ಪುಣೆಯಿಂದ ದೊಂಬಿವಾಲಿಗೆ ಒಂದು ಕಾರಿನಲ್ಲಿಹಿಂತಿರುಗುವ ಅವಕಾಶ ದೊರಕಿತು! ನಮಗಾಗಿ ಋಷಿಗಳ ಯೋಜನೆ ಬೇರೆಯೇ ಇತ್ತು! ಈ ಸಹಾಯಕ್ಕಾಗಿ ಕೃತಜ್ಞತೆಯಿಂದ ಕಣ್ಣಲ್ಲಿ ನೀರು ಬಂದಿದ್ದನ್ನು ತಡೆಯದಾದೆ.

– ವಿರಕ್ತಿ ಸಾಖರೆ

ಪುಣೆಯಿಂದ ದೊಂಬಿವಾಲಿಗೆ ಪ್ರಯಾಣಿಸುವಾಗ ನನಗೆ ಬಸ್ಸಿನಲ್ಲಿ ಕುಳಿತುಕೊಳ್ಳಲು ಜಾಗ ಸಿಗಲಿಲ್ಲ. ತಕ್ಷಣ ನಾನು ಬೆಳಕನ್ನು ಚಾನಲ್ ಮಾಡಲು ಶುರುಮಾಡಿದೆ. ಬಸ್ಸಿನ ನಿರ್ವಾಹಕ ನನಗೆ ಕುಳಿತು ಪ್ರಯಾಣಿಸಲು ತನ್ನ ಜಾಗವನ್ನೇ ಬಿಟ್ಟುಕೊಟ್ಟನು. ಬಸ್ಸಿನ ನಿರ್ವಾಹಕನ ಸೀಟಿನಲ್ಲಿ ಕುಳಿತು ನಾನು ಪ್ರಯಾಣಿಸಿದೆ ಮತ್ತು ಲೈಟ್ ಚಾನಲಿಂಗ್ ಅನ್ನು ಮುಂದುವರೆಸಿದೆ!

– ವಿಜಯ್‌ಕುಮಾರ್ ಸಾಖರೆ

ನಾನು ಧ್ಯಾನಕ್ಕೆ ಕುಳಿತಾಕ್ಷಣ ವಿಶ್ವದೊಂದಿಗೆ ಒಂದು ಸಂಪರ್ಕವೇರ್ಪಟ್ಟು, ನಾನು ಪರಿಪೂರ್ಣಳಾದಂತೆ ಅನಿಸುತ್ತದೆ. ಅನೇಕ ಭಾಗಗಳಿಂದ ಮಾಡಿದ ಚಿತ್ರವೊಂದರಲ್ಲಿ ನಾನೇ ಕೊನೆಯ ಭಾಗವಾಗಿದ್ದು ಈಗ ಅದು ಪೂರ್ಣಗೊಂಡಂತೆ ಅನಿಸುತ್ತದೆ! ನಾನು ಪ್ರಶಾಂತತೆಯ ಹಾಗೂ ಚೈತನ್ಯದ ತರಂಗಗಳನ್ನು ಅನುಭವಿಸುತ್ತೇನೆ.

ಜನ್ಮಾಷ್ಟಮಿಯ ಹಿಂದಿನ ದಿನ ಧ್ಯಾನಮಾಡುತ್ತಿದ್ದಾಗ ನನ್ನ ದೇಹವು ಬೆಳಕಿನಿಂದ ತುಂಬಿತು. ನನ್ನಲ್ಲಿದ್ದ ಹಳೆಯ ನೆನಪು ಹಾಗೂ ಭಾವನೆಗಳೆಲ್ಲಾ ಹೊರಹೋಗಿ ನಿರಾಳವಾದಂತೆನಿಸಿತು. ಅಲ್ಲಿ ನನಗೆ ತೆರೆದುಕೊಂಡಿರುವ ಒಂದು ಬಾಗಿಲು ಕಾಣಿಸಿತು.

– ಗೀತಾ ಜೋಶಿ

ಧ್ಯಾನದಲ್ಲಿ, ನಾನು ನಿಶ್ಚಲತೆ ಹಾಗೂ ಕೊನೆಯಿಲ್ಲದ ವಿಸ್ತಾರವನ್ನು ಅನುಭವಿಸಿದೆ.

– ಯೋಗಾ ನರಸಿಂಹ

ನನಗೇನಾದರೂ ತೊಂದರೆಯಾದರೆ ನಾನು ಬೆಳಕನ್ನು ನೆನಪಿಸಿಕೊಂಡು ನನ್ನಲ್ಲಿ ತುಂಬಿಕೊಂಡಾಗ ಅದು ನನಗೆ ಸಹಾಯ ಮಾಡುತ್ತದೆ. ಹೋದ ತಿಂಗಳು ನಾನು ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗ ಹವಾಗುಣದ ಏರಿಳಿತದಿಂದಾಗಿ ಉದ್ರಿಕ್ತ ಸ್ಥಿತಿ ಉಂಟಾಯಿತು. ನಾನು ಬೆಳಕನ್ನು ಪ್ರಾರ್ಥಿಸಿ, ಅದನ್ನು ಹರಡಿದೆ. ತಕ್ಷಣ ಏರಿಳಿತದ ಉದ್ರಿಕ್ತ ಸ್ಥಿತಿ ನಿಂತು ನಮ್ಮ ವಿಮಾನ ಸುಖಕರವಾಗಿ ಭೂಸ್ಪರ್ಶ ಮಾಡಿತು. ನಾನು ಪ್ರಾರ್ಥಿಸಿದಾಕ್ಷಣ ಬೆಳಕು ನನ್ನೆಲ್ಲ ತೊಂದರೆಗಳನ್ನು ದೂರ ಮಾಡುತ್ತದೆ. ಬೆಳಕಿನ ಬಗೆಗಿನ ನನ್ನ ನಂಬಿಕೆ ಮತ್ತಷ್ಟು ಬಲವಾಗಿದೆ. ನಮ್ಮ ಒಳಿತಿಗಾಗಿ ಏನಾಗಬೇಕೋ ಅದು ಸರಿಯಾದ ಸಮಯದಲ್ಲಿ ಆಗುತ್ತದೆ ಎಂಬುದು ನನಗೀಗ ತಿಳಿದಿದೆ. ಪ್ರತಿಕ್ಷಣ ಬೆಳಕು ನನ್ನೊಡನೆ ಇದ್ದು ನನ್ನನ್ನು ಮಾರ್ಗದರ್ಶಿಸುತ್ತಿದೆ.

– ಲೀನಾ ಅಮಿರ್

ನಾನು ಈಗ ಧೈರ್ಯಶಾಲಿಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅವಶ್ಯಕತೆ ಕಂಡುಬಂದಲ್ಲಿ ತೊಂದರೆ ಕೊಡುವ ಜನಗಳಿಗೆ 'ಬೇಡ' ಎಂದು ಉತ್ತರಿಸುವಷ್ಟು ಧೈರ್ಯಶಾಲಿಯಾಗಿದ್ದೇನೆ. ಅವರೊಡನೆ ದೃಢವಾಗಿ ಆದರೆ ಕರುಣೆಯಿಂದ ವ್ಯವಹರಿಸಲು ಸಾಧ್ಯವಾಗಿದೆ.

– ಮೈತ್ರೇಯಿ ಶಶಾಂಕ್

ಕೆಲವೊಮ್ಮೆ ಧ್ಯಾನದಲ್ಲಿ ಬೆಳಕಿನ ತರಂಗಗಳು ನನ್ನ ದೇಹದಿಂದ ಹೊರಹೊಮ್ಮುತ್ತವೆ. ನನ್ನ ಸುತ್ತಲೂ ಬೆಳಕಿನ ಪ್ರಖರತೆ ಹೆಚ್ಚುತ್ತಿರುವಂತೆ ಅನಿಸುತ್ತದೆ. ಕೆಲವೊಮ್ಮೆ ಹಿನ್ನಲೆಯಲ್ಲಿ 'ಓಂ' ನಾದವು ಕೇಳಿಬರುತ್ತದೆ, ಅದು ಬೆಳಕಿನೊಂದಿಗೆ ಬೆರೆತು ಬೆಳಕಿನ ಜೊತೆಯಲ್ಲಿ ಅದೂ ಹರಡುತ್ತದೆ.

– ಸಂಜಯ್ ಮನೋಹರ್

ಸೂರ್ಯನ ಶುಭ್ರ ಬೆಳಕನ್ನು, ಮರಗಳ ಮರೆಯಿಂದ ಸೂರ್ಯನ ಬೆಳಕನ್ನು ಅಥವಾ ಮೋಡದ ವಾತಾವರಣದ ಬೆಳಕನ್ನು ನಾನು ನೋಡಲೆಂದು ನಿಂತಾಗ, ನನ್ನ ಅರಿವು ಭೌತಿಕವಾಗಿ ಜಾಗೃತಕೊಂಡು ಬೆಳಕಿನ ಮಿಡಿತವನ್ನು ಅನುಭವವಿಸುತ್ತೇನೆ. ಕಣ್ಣನ್ನು ಮುಚ್ಚಿರಲಿ ಅಥವ ತೆಗೆದಿರಲಿ, ಭಗವಂತನ ಪ್ರೀತಿಯ ಅಭಿವ್ಯಕ್ತಿಯನ್ನು, ನನ್ನಲ್ಲಿ ಮತ್ತು ನನ್ನಿಂದಾಚೆ ಅನುಭವಿಸುತ್ತೇನೆ.

– ಲುಸಿಂಡಾ ಬಾಷ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ